॥ ಹರಿಃ ಓಂ ॥

ಓಂ ನಾಸ್ತಿನಾರಾಯಣ ಸಮಂನ ಭೂತೋ ನಭವಿಷ್ಯತಿ ।
ಏತೇನ ಸತ್ಯವಾಕ್ಯೇನ ಸರ್ವಾರ್ಥಾನ್ ಸಾಧಯಾಮ್ಯಹಂ

ಓಂ ನವೋ ವೇದಾಂತರಾದ್ಧಾಂತ ಸೂಕ್ತಿರತ್ನಾಕರಾತ್ಮನೇ ।
ಶ್ರೀಮದಾನಂದತೀರ್ಥಾಖ್ಯ ಭಗವದ್ದುಗ್ಧಸಿಂಧವೇ ॥

# ಶ್ರೀಮನ್ಮಧ್ವಾಚಾರ್ಯರ ರಚಿತ ಸರ್ವಮೂಲ ಗ್ರಂಥಗಳು

## ಮತ್ತೂ

## ತದುಪಯುಕ್ತ ಟೀಕಾ ಟಿಪ್ಪಣಿಗಳು




ಸಂಗ್ರಹ, ಶೋಧನೆ, ವಿವರಣೆ, ಅನುವಾದ

**ಬದರೀನಾಥಾಚಾರ್ಯ ಘೂಳೀ**

SRIMANMADHWACHARYA RACHITHA SARVAMOOLA GRANTHA MATTU TADUPAYUKTA TEEKA TIPPANIGALU
Compiled and Edited by Prof. Badarinathacharya Ghooli M.A., Retired Professor and Published by Madhava Madhwa Prakashana No. 164, "Soudamini" 7th Cross, 9th Main, BEML Layout, Rajarajeshwarinagar, Bangalore-560 089
Phone : 080-28602191

First Edition : 2010

© Prof. Badarinathachar Ghooli

Typeset (DTP) By
**Sri Raghavendra Enterprises**
Banashankari I Stage,
Bangalore-560 050
Phone 080-22421294

॥ ಹರಿಃ ಓಂ ॥

# ಶ್ರೀಮನ್ಮಧ್ವಾಚಾರ್ಯ ರಚಿತ ಸರ್ವಮೂಲ ಗ್ರಂಥಗಳು ಮತ್ತೂ ತದುಪಯುಕ್ತ ಟೀಕಾ ಟಿಪ್ಪಣಿಗಳು

ಶ್ರೀಮದಾನಂದತೀರ್ಥರು ೩೭ ಗ್ರಂಥಗಳನ್ನು ರಚಿಸಿರುವುದಾಗಿ ಸುಪ್ರಸಿದ್ಧ. ಈ ಗ್ರಂಥಗಳು ಯಾವುದೆಂಬುದನ್ನು ಶ್ರೀವ್ಯಾಸರಾಜರು ೧೪ ಶ್ಲೋಕಗಳಿಂದ ತಿಳಿಸಿಕೊಡುತ್ತಾರೆ. ಇದಕ್ಕೆ ಗ್ರಂಥಮಾಲಾಸ್ತೋತ್ರವೆಂದು ಪ್ರಸಿದ್ಧಿ.

ಕೃಷ್ಣಂ ವಿದ್ಯಾಪತಿಂ ನತ್ವಾ ಪೂರ್ಣಬೋಧಾರ್ಯಸದ್ಗುರೂನ್ ।
ಜಯತೀರ್ಥಮುನೀನ್ ನತ್ವಾ ವಕ್ಷ್ಯೇಽಹಂ ಗ್ರಂಥಮಾಲಿಕಾಮ್ ॥ ೧ ॥

ನಾರಾಯಣೇನ ವ್ಯಾಸೇನ ಪ್ರೇರಿತಸ್ತತ್ತ್ವಸಂವಿದೇ ।
ಗ್ರಂಥಾನ್ ಮಧ್ವಶ್ಚಕಾರಾಸೌ ಸಪ್ತತ್ರಿಂಶದಮಂದಧೀಃ ॥ ೨ ॥

ಗೀತಾಭಾಷ್ಯಂ ಚಕಾರಾಸೌ ಪ್ರಥಮಂ ತುಷ್ಟಿದಂ ಹರೇಃ ।
ಭಾಷ್ಯಾಣುಭಾಷ್ಯೇ ಚಕ್ರೇಽಥ ಹ್ಯನುವ್ಯಾಖ್ಯಾನಮುತ್ತಮಮ್ ॥ ೩ ॥

ಪ್ರಮಾಣಲಕ್ಷಣಂ ನಾಮ ಕಥಾಲಕ್ಷಣಸಂಜ್ಞಿತಮ್ ।
ಉಪಾಧಿಖಂಡನಂ ಚಕ್ರೇ ಮಾಯಾವಾದಸ್ಯ ಖಂಡನಮ್ ॥ ೪ ॥

ಚಕ್ರೇ ಪ್ರಪಂಚಮಿಥ್ಯಾತ್ವಮಾನಖಂಡನಮೇವ ಚ ।
ಚಕಾರ ತತ್ತ್ವಸಂಖ್ಯಾನಂ ಸಾಧನಂ ವಿಷ್ಣುದರ್ಶನಮ್ ॥ ೫ ॥

ಗ್ರಂಥಂ ತತ್ತ್ವವಿವೇಕಾಖ್ಯಂ ತತ್ತ್ವೋದ್ಯೋತಂ ಹರೇಃ ಪ್ರಿಯಮ್ ।
ಕರ್ಮನಿರ್ಣಯನಾಮಾನಂ ಗ್ರಂಥಂ ನ್ಯಾಯಾರ್ಥಬೃಂಹಿತಮ್ ॥ ೬ ॥

ಸುಖತೀರ್ಥಯತಿಶ್ಚಕ್ರೇ ವಿಷ್ಣುತತ್ತ್ವವಿನಿರ್ಣಯಮ್ ।
ಋಗ್ಭಾಷ್ಯಂ ಚ ಚಕಾರಾಸೌ ಸರ್ವವೇದಾರ್ಥನಿರ್ಣಯಮ್ ॥ ೭ ॥

ಐತರೇಯಂ ತೈತ್ತಿರೀಯಂ ಬೃಹದಾರಣ್ಯಮೇವ ಚ ।
ಈಶಾವಾಸ್ಯಂ ಕಾಠಕಂ ಚ ಛಾಂದೋಗ್ಯಾಥರ್ವಣೇ ತಥಾ ॥ ೮ ॥

ಮಾಂಡೂಕ್ಯಂ ನಾಮ ಷಟ್ಪ್ರಶ್ನಂ ತಥಾ ತಲವಕಾರಮ್ ।
ಚಕ್ರೇ ಭಾಷ್ಯಾಣಿ ದಿವ್ಯಾನಿ ದಶೋಪನಿಷದಾಂ ಗುರುಃ ॥ ೯ ॥

ನಿರ್ಣಯಂ ಸರ್ವಶಾಸ್ತ್ರಾಣಾಂ ಗೀತಾತಾತ್ಪರ್ಯಸಂಜ್ಞಕಮ್ ।
ಸಂನ್ಯಾಯವಿವೃತಿಂ ನಾಮ ನ್ಯಾಯಶಾಸ್ತ್ರನಿಕೃಂತನೀಮ್ ॥ ೧೦ ॥

**ನರಸಿಂಹನಖಸ್ತೋತ್ರಂ ಚಕ್ರೇ ಯಮಕಭಾರತಮ್ ।**
**ದ್ವಾದಶಸ್ತೋತ್ರಮಕರೋತ್ ಕೃಷ್ಣಾಮೃತಮಹಾರ್ಣವಮ್ ॥ ೧೧ ॥**

**ತಂತ್ರಸಾರಂ ಚಕಾರಾಸೌ ಸದಾಚಾರಸ್ಮೃತಿಂ ಸುಧೀಃ ।**
**ಶ್ರೀಮದ್ಭಾಗವತಸ್ಯಾಪಿ ತಾತ್ಪರ್ಯಂ ಜ್ಞಾನಸಾಧನಂ ॥ ೧೨ ॥**

**ಮಹಾಭಾರತತಾತ್ಪರ್ಯನಿರ್ಣಯಂ ಸಂಶಯಚ್ಛಿದಮ್ ।**
**ಯತಿಪ್ರಣವಕಲ್ಪಂ ಚ ಪ್ರಣವಾರ್ಥಪ್ರಕಾಶಕಮ್ ॥ ೧೩ ॥**

**ಜಯಂತೀನಿರ್ಣಯಂ ಚಕ್ರೇ ದೇವಕೀಗರ್ಭಜನ್ಮನಃ ।**
**ಕೃಷ್ಣಸ್ಯ ಕೃಷ್ಣ ಭಕ್ತೋಽಯಂ ದ್ವೈಪಾಯನಕರಾಬ್ಜಭೂಃ ॥ ॥ ೧೪ ॥**

**ತ್ರಿಂಶತ್ಸಹಸ್ರಂ ದ್ವ್ಯಧಿಕಮಧಿಕಂ ಕೃಷ್ಣತುಷ್ಟಿದಮ್ ।**
**ಏತೇಷಾಂ ಪಾಠ ಮಾತ್ರೇಣ ಮಧ್ವೇಶಃ ಪ್ರೀಯತೇ ಸದಾ ॥ ॥ ೧೫ ॥**

ಇವುಗಳಲ್ಲಿ ಆಚಾರ್ಯ ಮಧ್ವರು ಬಾಲ್ಯದಲ್ಲೇ ವಾಸುದೇವನೆಂದು ಕರೆಸಿಕೊಂಡಾಗ ಎರಡೇ ಶ್ಲೋಕಗಳಾದ **"ಕಂದುಕಸ್ತುತಿ"** (ಶ್ರೀಕೃಷ್ಣಸ್ತುತಿ) ಎಂಬುದನ್ನು ರಚಿಸಿರುವುದು ಈ ೩೭ ಗ್ರಂಥಗಳಲ್ಲಿ ಸೇರಿಸಿಲ್ಲ. ಇದೂ ಅಲ್ಲದೆ ಶ್ರೀಮದಾಚಾರ್ಯರು ಹೀಗೆ ೩೭ + ೧ ಗ್ರಂಥಗಳನ್ನಷ್ಟೇ ರಚಿಸಿರುತ್ತಾರೆಂದು ಖಚಿತವಾಗಿ ಹೇಳಲು ಬರುವುದಿಲ್ಲ. ಈ ಮಾತನ್ನು ಶ್ರೀಮಧ್ವವಿಜಯದಲ್ಲಿ ಶ್ರೀನಾರಾಯಣಪಂಡಿತಾಚಾರ್ಯರು ತಿಳಿಸಿರುತ್ತಾರೆ.

**ಅಂಬರಗಂಗಾಚುಂಬಿತಪಾದಃ ಪದತಲವಿದಲಿಗುರುತರಶಕಟಃ ।**
**ಕಾಲಿಯನಾಗಕ್ಷ್ವೇಲನಿಹಂತಾ ಸರಸಿಜನವದಲವಿಕಸಿತನಯನಃ ॥**
**ಕಾಲಘನಾಲೀಕರ್ಬುರಕಾಯಃ ಶರಶತಶಕಲಿತರಿಪುಶತನಿವಹಃ ।**
**ಸಂತತಮಸ್ಮಾನ್ ಪಾತು ಮುರಾರಿಃ ಸತತಗಸಮಜವಖಗಪತಿನಿರತಃ ॥**

ಮತ್ತು **ಪ್ರಮೇಯ ನವಮಾಲಿಕಾ**ದಲ್ಲಿ ಶತಗ್ರಂಥಕರ್ತಃ ಎಂಬುದಾಗಿ ಶ್ರೀಮದಾಚಾರ್ಯರನ್ನು ಕರೆದಿರುತ್ತಾರೆ. ಅಣುಮಧ್ವವಿಜಯ ಶ್ರೀರಾಘವೇಂದ್ರತೀರ್ಥರು **ಬಹುಗ್ರಂಥಕರ್ತಾ** ಎಂದೂ ತಿಳಿಸಿರುತ್ತಾರೆ.

ಏನೇ ಆಗಲಿ ಜಗತ್ತಿನಲ್ಲಿ ಶ್ರೀಆಚಾರ್ಯರು ರಚಿಸಿದ ಗ್ರಂಥಗಳನ್ನು ಸರ್ವಮೂಲಾ ಎಂದೇ ಸುಪ್ರಸಿದ್ಧ. (ಶ್ರೀಮದಾಚಾರ್ಯರ ಪ್ರತಿಯೊಂದು ವಾಕ್ಯವು ಒಂದು ಗ್ರಂಥಕ್ಕೆ ಸಮಾನವಾಗಿರುವುದು).

ಈ ಆರಂಭದಲ್ಲಿ ಶ್ರೀವ್ಯಾಸರಾಜರು ಬರೆದಿರುವಂತೆ ಆಚಾರ್ಯ ಶ್ರೀಮಧ್ವರು ೩೭ ಗ್ರಂಥ ರಚಿಸಿದ ಬಗ್ಗೆ ತಿಳಿಸಿರುತ್ತಾರೆ.



ಅದೇ ರೀತಿ ಶ್ರೀವ್ಯಾಸರಾಜರು ಕೀರ್ತನೆಯಲ್ಲಿ **ಆರಾರು ಮೇಲೊಂದು ಅಧಿಕ ಲೆಖ್ಖದ ಗ್ರಂಥಸಾರವನು ರಚಿಸಿ...**

**ದಾಸವರೇಣ್ಯರು ಶ್ರೀಪುರಂದರದಾಸರು**

**೩೭ ಗ್ರಂಥಗಳ ಸ್ಥಾಪಿಸಿದ ನಮ್ಮ ಅಲವಬೋಧರ ಭಾಜಿಸಿರಯ್ಯ**

ಶ್ರೀಮದಾಚಾರ್ಯರು ವಿಶ್ವಗುರುಗಳು – ಒಂದು ಐತಿಹ್ಯ ಪ್ರಕಾರ ಶ್ರೀಮಧ್ವರು ತಮ್ಮ ಸಿದ್ಧಾಂತವಾದ "ತತ್ತ್ವವಾದ"ವನ್ನು ಪ್ರಚಾರ ಮಾಡುವಲ್ಲಿ ಅನೇಕ ಅದ್ವೈತ ಪಂಡಿತರನ್ನು ಪರಾಜಯಗೊಳಿಸಿದರು.

ಒಮ್ಮೆ ಪದ್ಮನಾಭತೀರ್ಥರೊಂದಿಗೆ ವಾದ ಮಾಡಲು ಬಂದ ವಾದಿಸಿಂಹನೆಂಬುವನು ಆಚಾರ್ಯರ ಸಿದ್ಧಾಂತ ಸೀಮಿತವಾಗಿದೆ. ಆದರೆ ನಮ್ಮ ಶ್ರೀಶಂಕರಾಚಾರ್ಯರದ್ದು ನೋಡಿ. ಜಗತ್ತಿನಲ್ಲಿ ಪ್ರಸಿದ್ಧ. ಅದಕ್ಕೇ ಅವರನ್ನು ಜಗದ್ಗುರುಗಳೆಂದು ಪ್ರಖ್ಯಾತಿ ಎಂದರಂತೆ. ಅದಕ್ಕೆ ಶ್ರೀಪದ್ಮನಾಭತೀರ್ಥರು ನಿಮ್ಮ ಗುರುಗಳು ಜಗತ್ತಿಗಷ್ಟೇ ಪ್ರಸಿದ್ಧರು, ಸೀಮಿತ. ಆದರೆ ನಮ್ಮ ಆಚಾರ್ಯ ಮಧ್ವರು ವಿಶ್ವ ಗುರುಗಳು. ಮೂರು ಲೋಕದಲ್ಲಿ ಅವರ ಸಿದ್ಧಾಂತದಂತೆ ಅವರೂ ಮಾನ್ಯರು ಎಂದು ಉತ್ತರಿಸಿದರು. ಇದಕ್ಕೆ ಪೋಷಕವಾಗಿ ಸುಮಧ್ವವಿಜಯದಲ್ಲಿ **"ಗರೀಯಶೀಂವಿಶ್ವಗುರೋಃ ವಿಶುದ್ಧಾಂ"** ಎಂದು ತಿಳಿಸಲಾಗಿದೆ. ಅಂತಹ ವಿಶ್ವಗುರುಗಳು ಬೇರೆ ಯಾರೂ ಅಲ್ಲ. ಶ್ರೀವಾಯುದೇವರೇ ಧರೆಗಿಳಿದು ಬಂದ ಮಧ್ವಾಚಾರ್ಯರೇ ಎಂಬುದನ್ನು **"ವಕ್ಷ್ಯಾಮಿವಾಯೋರವತಾರಲೀಲಾಂ"** ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಶ್ರೀಮದಾಚಾರ್ಯರ ಸಿದ್ಧಾಂತದಲ್ಲಿ ತತ್ತ್ವಜ್ಞಾನದ ಜತೆಗೆ ವಿಜ್ಞಾನವನ್ನು ಕಾಣಬಹುದು. ಶ್ರೀ ಆಚಾರ್ಯರು ಗೊಡ್ಡು ತತ್ತ್ವಜ್ಞಾನವನ್ನು ಹೆಚ್ಚಾಗಿ ತಿಳಿಸಿರುತ್ತಾರೆ. ಶಾಸ್ತ್ರ, ಆಚಾರ, ಅಧ್ಯಯನ, ಪೂಜೆ, ಸ್ವರ್ಗ, ಮುಕ್ತಿಯ ಬಗ್ಗೆ ಹೆಚ್ಚಿನ ರೀತಿಯಲ್ಲಿ ಕಾಣುತ್ತೇವೆ. ಆದರೆ ಈ ಆಧುನಿಕ ಯಂತ್ರ ಪರಿಮಾಣು, ವೈಜ್ಞಾನಯುಗದಲ್ಲಿ ಈ ತತ್ತ್ವಜ್ಞಾನವು ಎಷ್ಟು ಯುಕ್ತವು ? ಪ್ರಸ್ತುತವೇ ? ಎಂಬ ಪ್ರಶ್ನೆ ಜನಿಸುತ್ತದೆ.

ಇಂದಿನ ಜನಾಂಗ ಪ್ರಶ್ನೆ ಈ ರೀತಿ ಇರುತ್ತೆ : ಶ್ರೀ ಆಚಾರ್ಯ ಮಧ್ವರು ತಮ್ಮ ೩೭ ಗ್ರಂಥಗಳಲ್ಲಿ ಒಂದು "ಸದಾಚಾರಶ್ಮೃತಿ"ಯಲ್ಲಿ ಮನುಷ್ಯನು ಬೆಳಗ್ಗಿನಿಂದ ರಾತ್ರಿ ಮಲಗುವವರೆಗೂ ಆಚರಿಸಬೇಕಾದ ಕರ್ತವ್ಯಗಳನ್ನೂ ತಿಳಿಸುತ್ತಾರೆ. ಬೆಳಗಿನ ಝಾವದಿಂದ ರಾತ್ರಿಯವರೆಗೂ ಈ ಪ್ರಕಾರ ಆಚರಿಸುತ್ತಿದ್ದರೆ, ನಮ್ಮ ಸಂಸಾರ, ನೌಕರಿ, ಪೋಷಣೆ, ಇತ್ಯಾದಿಗಳನ್ನು ಹೇಗೆ ನಡೆಸಬೇಕು. ಇದು ದುಸ್ಸಾಧ್ಯವೆಂದು

ಹೇಳುವವರಿದ್ದಾರೆ. ಆದರೆ ಆಚಾರ್ಯರು ಒಂದು ಮಾತನ್ನು ತಿಳಿಸುತ್ತಾರೆ. ಯಾವುದೇ ಕಾರ್ಯ, ಕರ್ಮ ಮಾಡುವಾಗ ಮುಖ್ಯವಾಗಿ ಹರ್ಯರ್ಪಿತವೆಂಬ ಭಾವನೆಯಿಂದ ಸಾಧ್ಯವಾದಷ್ಟು ನಿರ್ವಂಚನೆಯಿಂದ ಆಚಾರಗಳನ್ನು ಅವಶ್ಯ ಆಚರಿಸಬೇಕು. ಏನೋ ಕುಂಟು ನೆಪ ಹೇಳಿ ಕರ್ಮಗಳನ್ನು ಎಂದಿಗೂ ಬಿಡಬಾರದು. ಇದು ಮುಖ್ಯ ತತ್ವವೆಂದು ಅನುಸರಿಸಬೇಕು. ಸಂಕೋಚವಾಗಿಯಾದರೂ ನಿತ್ಯಕರ್ಮಾನುಷ್ಠಾನ ಮಾಡಲೇಬೇಕು ಎಂದಿದ್ದಾರೆ.

ಇಷ್ಟೊಂದು ಸರ್ವಮೂಲ ಗ್ರಂಥಗಳ ಬಗ್ಗೆ ನನಗೆ ತಿಳಿದಷ್ಟು ಹಾಗೂ ಸರ್ವಮೂಲ ಗ್ರಂಥಗಳ ಟೀಕಾಕಾರರನ್ನು ಮತ್ತು ಟಿಪ್ಪಣಿ ವ್ಯಾಖ್ಯಾನಕಾರರ ಬಗ್ಗೆ ನಾನು ಸಂಗ್ರಹಿಸಿದ ಮಾಹಿತಿಗಳನ್ನು ತಿಳಿಸಲು ಪ್ರಯತ್ನ ಮಾಡಲಾಗಿದೆ. ಇದೂ ಅಲ್ಲದೆ ಇದರ ಮೇಲೆ ಹೆಚ್ಚಿನ ವಿಷಯಗಳು ನನ್ನ ಗಮನಕ್ಕೆ ಬಂದಿಲ್ಲ. ಇನ್ನೂ ವ್ಯಾಖ್ಯಾನಕಾರರ ಬಗ್ಗೆ ತಿಳಿಯದೇ ಇರುವುದು ನನ್ನ ಅಲ್ಪ ಬುದ್ಧಿಗೆ ಬಿಟ್ಟದ್ದು.

ಪುಟ ೨೮ರಿಂದ ೩೭ರವರಗಿನಲ್ಲಿ ⊗ ಗುರುತು ಇರುವುದು. ಈವರೆಗೂ ಮುದ್ರಣವಾಗಿಲ್ಲವೆಂದು ತಿಳಿದುಬಂದಿದೆ. ಸಾಕಷ್ಟು ಪ್ರಯತ್ನ ಮಾಡಿದೆ. ಮುಖ್ಯವಾಗಿ (೧) ಉತ್ತರಾದಿ ಮಠದ ಗ್ರಂಥಾಲಯ (೨) ಉಡುಪಿ ಮಧ್ವಮುನಿ ಸೇ. ಸಂಘದಿಂದಲೂ (೩) ಪೂರ್ಣಪ್ರಜ್ಞ ವಿದ್ಯಾಪೀಠ ಗ್ರಂಥ ಸಂಗ್ರಹದಿಂದಲೂ ಮತ್ತು ಕೆಲ ಪಂಡಿತರನ್ನು ವಿಚಾರಿಸಿ ಮಾಹಿತಿ ಪಡೆದಿದ್ದೇನೆ.

ಕೊನೆಗೆ ಸರ್ವಮೂಲ ಗ್ರಂಥಗಳನ್ನು ನಿತ್ಯ ಪಾರಾಯಣ ಮಾಡಲು ಸಮಯಾಭಾವವಿರುತ್ತಾದ ಕಾರಣದಿಂದಾಗಿ (೧) ಸರ್ವಮೂಲ ಗ್ರಂಥಗಳು ಯಾವುವು ಎನ್ನುವುದನ್ನೂ (೨) ಮತ್ತೂ ಸರ್ವಮೂಲ ಆದ್ಯಂತ ಶ್ಲೋಕಗಳನ್ನೂ ನಿತ್ಯ ಪಾರಾಯಣ ಮಾಡಲು ಉಪಯುಕ್ತವಾಗಲೆಂಬ ಅಂಶದಿಂದ ಅದನ್ನು ಸೇರಿಸಲಾಗಿದೆ.

ಮುಖ್ಯ ವಿಷಯ ಗಮನಿಸಬೇಕಾದ್ದು ಶ್ರೀಮದಾಚಾರ್ಯರ ಪವಿತ್ರ ಗ್ರಂಥಗಳ ಅಧ್ಯಯನದಿಂದಲೆ, ಗುರುಗಳು ಪ್ರೀತರಾಗಿ, ಹರಿಯಲ್ಲಿ ಭಕ್ತಿ ಉದ್ಭವಿಸುವಂತೆ ಅನುಗ್ರಹಿಸಬೇಕಾದರೆ ಉತ್ತಮ ಹಿರಿಯ ಪಂಡಿತರಲ್ಲಿ ಅಧ್ಯಯನ ಮಾಡಬೇಕು ಎನ್ನುವುದೇ ನನ್ನ ಕಳಕಳಿಯ ವಿನಂತಿ. ಅನುವಾದಿತ ಗ್ರಂಥಗಳಿಂದ (ಮುದ್ರಿತ ಪುಸ್ತಕಗಳಿಂದ) ಜ್ಞಾನ ಜನಿಸುವುದಾದರೂ ಅಜ್ಞಾನ ಅಸಂಪೂರ್ಣ. ಶಾಸ್ತ್ರ ರಹಸ್ಯಗಳನ್ನು ಗುರು ಮುಖೇಣ ಬೋಧವಾಗಬೇಕು.



## ಸರ್ವಮೂಲ ಗ್ರಂಥಗಳು

☞ **ಸೂತ್ರಪ್ರಸ್ಥಾನ**

೧) ಬ್ರಹ್ಮಸೂತ್ರಭಾಷ್ಯ    ೨) ಅಣುಭಾಷ್ಯ
೩) ಅನುವ್ಯಾಖ್ಯಾನ    ೪) ನ್ಯಾಯವಿವರಣ

☞ **ಗೀತಾಪ್ರಸ್ಥಾನ**

೫) ಗೀತಾಭಾಷ್ಯ    ೬) ಗೀತಾತಾತ್ಪರ್ಯ

☞ **ಉಪನಿಷತ್‌ಪ್ರಸ್ಥಾನ**

೭) ಈಶಾವಾಸ್ಯೋಪನಿಷತ್‌ಭಾಷ್ಯ
೮) ತಲವಕಾರ (ಕೇನೋಪನಿಷತ್) ಭಾಷ್ಯ
೯) ಕಾಠಕೋಪನಿಷತ್‌ಭಾಷ್ಯ
೧೦) ಷಟ್‌ಪ್ರಶ್ನೋಪನಿಷತ್‌ಭಾಷ್ಯ
೧೧) ಅಥರ್ವಣೋಪನಿಷತ್‌ಭಾಷ್ಯ
೧೨) ಮಾಂಡೂಕೋಪನಿಷತ್‌ಭಾಷ್ಯ
೧೩) ತೈತ್ತರೀಯೋಪನಿಷತ್‌ಭಾಷ್ಯ
೧೪) ಐತರೇಯೋಪನಿಷತ್‌ಭಾಷ್ಯ
೧೫) ಛಾಂದೋಗ್ಯೋಪನಿಷತ್‌ಭಾಷ್ಯ
೧೬) ಬೃಹದಾರಣ್ಯಕೋಪನಿಷತ್‌ಭಾಷ್ಯ

☞ **ವೇದಪ್ರಸ್ಥಾನ :** ೧೭) ಋಗ್ಭಾಷ್ಯ

☞ **ಪ್ರಕರಣ ಗ್ರಂಥಗಳು**

೧೮) ತತ್ತ್ವಸಂಖ್ಯಾನ    ೧೯) ತತ್ತ್ವವಿವೇಕ
೨೦) ತತ್ತ್ವೋದ್ಯೋತ    ೨೧) ಪ್ರಮಾಣಲಕ್ಷಣ
೨೨) ಕಥಾಲಕ್ಷಣ    ೨೩) ಉಪಾಧಿಖಂಡನ
೨೪) ಮಾಯಾವಾದಖಂಡನ
೨೫) ಪ್ರಪಂಚಮಿಥ್ಯಾತ್ವಾನುಮಾನಖಂಡನ
೨೬) ವಿಷ್ಣುತತ್ತ್ವವಿನಿರ್ಣಯ    ೨೭) ಕರ್ಮನಿರ್ಣಯ

☞ **ಇತಿಹಾಸ ಪ್ರಸ್ಥಾನ ಗ್ರಂಥಗಳು**

೨೮) ಮಹಾಭಾರತತಾತ್ಪರ್ಯನಿರ್ಣಯ ೨೯) ಯಮಕಭಾರತ

☞ **ಪುರಾಣ ಪ್ರಸ್ಥಾನ ಗ್ರಂಥ**

೩೦) ಭಾಗವತತಾತ್ಪರ್ಯನಿರ್ಣಯ

☞ **ಆಚಾರ ಗ್ರಂಥಗಳು**

೩೧) ಸದಾಚಾರಸ್ಮೃತಿ ೩೨) ಕೃಷ್ಣಾಮೃತ ಮಹಾರ್ಣವ

೩೩) ತಂತ್ರಸಾರಸಂಗ್ರಹ ೩೪) ಯತಿಪ್ರಣವಕಲ್ಪ

೩೫) ಜಯಂತಿನಿರ್ಣಯ

**ಇತರೆ ಗ್ರಂಥಗಳು :** ಕಂದುಕಸ್ತುತಿ (ಶ್ರೀಕೃಷ್ಣಸ್ತುತಿ)

ಈ ಕೃತಿಯು ಆಚಾರ್ಯ ಮಧ್ವರು ಪೂರ್ವಾಶ್ರಮದಲ್ಲಿ ಬಾಲಕ ವಾಸುದೇವರೆಂದು ಇದ್ದಾಗ ಬರೆದುದಾಗಿ ಪ್ರಸಿದ್ಧವಿದೆ. ಇದು ಸರ್ವಮೂಲ ಗ್ರಂಥಗಳಲ್ಲಿ ಸೇರಿಸದೇ ಹೋದರೂ ಪ್ರಾಚೀನ ಗ್ರಂಥಗಳಲ್ಲಿರುವುದರಿಂದ ಪ್ರಸಿದ್ಧವಾಗಿದೆ.

**ವಿಶಿಷ್ಟ ಕೃತಿಗಳು**

ಶ್ರೀ ಹೃಷೀಕೇಶತೀರ್ಥರ ಮಠಾನುಸಾರ ಗ್ರಂಥಗಳಲ್ಲಿಯೂ ಮತ್ತು ಅಖಿಲ ಭಾರತ ಮಧ್ವ ಮಂಡಲದ ವತಿ ಪ್ರಕಟಿತವಾಗಿರುವುದು.

೧. ನ್ಯಾಯ ಪದ್ಧತಿ ೨. ತಿಥಿ ನಿರ್ಣಯ

ಈ ಎರಡೂ ಕೃತಿಗಳು ಆಚಾರ್ಯರದ್ದೇ ಇರುವುದಾಗಿ ತಿಳಿದುಬರುತ್ತದೆ.

೩. ಬಿಲ್ವ ಮಂಗಲ ಸಾಹುಃ (ಸಾಧು) – ಶ್ರೀಮದಾಚಾರ್ಯರ ರಚನೆ ಆಗಿರಬೇಕೆಂಬ ಒಂದು ಸಾಂಪ್ರದಾಯವಿದೆ. ಇದಕ್ಕೆ ಉತ್ತರಾದಿ ಮಠದ ಶ್ರೀ ಸತ್ಯಪರಾಯಣತೀರ್ಥರ ವಿಸ್ತೃತ ವ್ಯಾಖ್ಯಾನವಿದೆ. ಈಗ ಅದರ ಪ್ರಕಟಣೆಯೂ ಆಗಿದೆ. ಸತ್ಯಪರಾಯಣತೀರ್ಥರು ತಿಳಿಸಿದಂತೆ

**ಬಿಲ್ವಮಂಗಳಸಾಧುಃ ಇತಿ ಸರ್ವಜ್ಞೋಕ್ತಂ ವಾಕ್ಯಂ**
**ಸರ್ವಮೂಲಾಂತರ್ಭೂತಂ ಇತಿ ಸಂಪ್ರದಾಯವಿದುಃ**

ಅಷ್ಟೇ ಅಲ್ಲದೆ ಆಚಾರ್ಯರು ನೂರಾರು ಗ್ರಂಥಕರ್ತರಾಗಿದ್ದರೆಂಬುದನ್ನು



ಅಣುಮಧ್ವವಿಜಯ ೨೯ನೇ ಶ್ಲೋಕದಲ್ಲಿ **''ಶತಗ್ರಂಥಕರ್ತಾ''** ಎಂದು ತಿಳಿಸಲಾಗಿದೆ. (ಪ್ರಮೇಯ ನವಮಾಲಿಕಾ)

ಶ್ರೀ ಸುಮಧ್ವವಿಜಯದಲ್ಲಿ **''ನಾನಾಸುಭಾಷಿತ ಸ್ತೋತ್ರ–ಗಾಥಾದಿಕೃತಿಸತ್ಕೃತಿಃ''** ಎಂದು ತಿಳಿಸಲಾಗಿದೆ.

ಹೀಗೆ ಶ್ರೀಮದಾಚಾರ್ಯರ ಸರ್ವತೋಮುಖ ಪ್ರತಿಭೆಯನ್ನು ಕಾಣುತ್ತೇವೆ.

ವೇದಗಳ ನಿಜಾರ್ಥ ತೋರಿಸಿರುವ ಋಗ್ಭಾಷ್ಯವನ್ನು ರಚಿಸಿದ್ದರಿಂದ ಇವರನ್ನು ಬಿಟ್ಟರೆ ಬೇರೆ ಯಾವ ಮತಾಚಾರ್ಯರು ಬರೆಯದೇ ಇರುವುದು ಇವರ ವೈಶಿಷ್ಟ್ಯತೆ. ಶ್ರೀಮದಾಚಾರ್ಯರ ಬಗ್ಗೆ ಹೀಗೆ ಆಕ್ಷೇಪಣೆ ಮಾಡುವುದುಂಟು. ನಿಮ್ಮ ಆಚಾರ್ಯರು ಅದ್ವೈತಿಗಳನ್ನೂ, ಅವರ ಸಿದ್ಧಾಂತವನ್ನೂ ಖಂಡನ ಮಾಡುವುದೇ ಪ್ರವೃತ್ತಿ ಇದ್ದಿತು ಅಂತ. ಅದಕ್ಕೆ ಉತ್ತರವನ್ನು ಟೀಕಾಕಾರರು ವೇದ, ಉಪನಿಷತ್‌ಗಳಲ್ಲಿನ ಯಥಾರ್ಥವನ್ನು ತಿಳಿಸಬೇಕಾದ್ದರಿಂದ ಇತರ ಮತಗಳಲ್ಲಿ ಎಷ್ಟೊಂದು ದೋಷ, ತನ್ಮೂಲಕ ಮೋಕ್ಷಮಾರ್ಗಕ್ಕೆ ದಾರಿ ತೋರಿಸದೇ ದುಷ್ಟಮಾರ್ಗ ತಮಸ್ಸನ್ನು ಹೊಂದುವಂತಹವುಗಳಾಗಿದೆ. ಅಂಥ ಆ ಮತಗಳನ್ನು ಖಂಡನೆ ಮಾಡದೆ ನಿರ್ವಾಹವಿರುವುದಿಲ್ಲ. ಈಶಾವಾಸ್ಯದಲ್ಲಿ ತಿಳಿಸಿದಂತೆ **''ಅಂಧಃತಮಃಪ್ರವಿಶಂತಿ ಏ ಅವಿದ್ಯಾ ಮುಪಾಸತೇ''** ಎಂದು ಆ ಮತಗಳ ವ್ಯಾಖ್ಯಾನಗಳಾಗಿರುವುದು ಎಂಬುದಾಗಿ ಸ್ಪಷ್ಟ ಖಡಾಖಂಡಿತ ತಿಳಿಸಿಕೊಟ್ಟವರು ಆಚಾರ್ಯರೇ.

ಬ್ರಹ್ಮಸೂತ್ರ ಭಾಷ್ಯಗಳಿಗೆ ಆಚಾರ್ಯ ಮಧ್ವರು ನಾಲ್ಕು ರೀತಿಯ ವ್ಯಾಖ್ಯಾನ ಬರೆದಿರುವಂತೆ ಬೇರೆ ಯಾರೂ ಬರೆದಿರುವುದಿಲ್ಲ. ಭಗವದ್ಗೀತೆಗೆ ಎರಡು ವ್ಯಾಖ್ಯಾನ ಇರುವುದೇ ಆಗಿರುತ್ತೆ. ಇನ್ನು ಯಾವ ಮತಾಚಾರ್ಯರೂ ತಂತ್ರಗಳ ಬಗ್ಗೆ ಬರೆಯದೇ ಇರುವುದನ್ನು ಶ್ರೀಆಚಾರ್ಯರು "ತಂತ್ರಸಾರ" ಎಂಬ ಉತ್ಕೃಷ್ಟ ಗ್ರಂಥವನ್ನು ಬರೆದ ಏಕೈಕ ಆಚಾರ್ಯರು, ವಿಧಿಪೂಜಾ, ದೇವತಾಮಂತ್ರಗಳು, ಉಪಾಸನೆ, ದೇವಾಲಯ ನಿರ್ಮಾಣ, ವಾಸ್ತು, ಯಜ್ಞವೇದಿಕೆ, ಮಂಡಲ, ಮೂರ್ತಿಗಳ ಲಕ್ಷಣ ಇತ್ಯಾದಿಯಾಗಿ ದೀರ್ಘವಾಗಿ ತಿಳಿಸಿಕೊಟ್ಟ ಕೀರ್ತಿ ಶ್ರೀಆಚಾರ್ಯರದ್ದೇ ಆಗಿರುತ್ತೆ. ಶ್ರೀಆಚಾರ್ಯರು ಈ ಒಂದು ಕೃತಿಯಿಂದ ಅವರಿಗೆ ವೇದಾಂತದ ಬಗ್ಗೆ ಅಷ್ಟೇ ಅಲ್ಲದೆ ವಿಜ್ಞಾನದ ಬಗ್ಗೆ ಇಷ್ಟೊಂದು ತಿಳಿದಿರುವುದು ಮತ್ತು ವ್ಯಾಖ್ಯಾನಿಸಿದುದನ್ನು ನೋಡಿದರೆ ಎಲ್ಲಿ ವೇದಾಂತ, ಎಲ್ಲಿ ವಿಜ್ಞಾನ ಆಚಾರ್ಯರು ಇವನ್ನು ಎಲ್ಲಿ, ಯಾವಾಗ, ಯಾರಲ್ಲಿ ಅಧ್ಯಯನ ಮಾಡಿರುತ್ತಾರೆ ? ಅನ್ನುವುದು ಆಶ್ಚರ್ಯ. ಇದರಿಂದ ಆಚಾರ್ಯರು ಸರ್ವಜ್ಞರೆಂಬುದು ಸಿದ್ಧ.

ಶ್ರೀ ಮಧ್ವಾಚಾರ್ಯರು ವೇದಾಂತ ಗ್ರಂಥಗಳನ್ನು ಆದರೆ ಅವುಗಳಲ್ಲಿ ಬಹುತೇಕ ಪರಮತ ಖಂಡನ ಪೂರ್ವಕ ವಿಷಯಗಳೇ ಬರುತ್ತೆ. ಅವರಿಗೆ ಇತರೇ ಮತಗಳನ್ನು ವಿಮರ್ಶಿಸಿ ಖಂಡಿಸುವುದು ಒಂದು ವ್ಯಸನವೇ ಆಗಿರುತ್ತೆ ಎಂಬ ಆಕ್ಷೇಪ ಕೇಳಿಬರುತ್ತೆ. ಈ ರೀತಿ ವಿಮರ್ಶಿಸುವುದು ಅಯುಕ್ತವೇ. ಏಕೆಂದರೆ ಶ್ರೀಮದಾಚಾರ್ಯರ ಗ್ರಂಥಾವಲೋಕನಗಳನ್ನು ನಿರ್ವ್ಯಾಜ್ಯದಿಂದ ಅಧ್ಯಯನ ಮಾಡದೆ ಇಂತಹ ಆಕ್ಷೇಪ ಮಾಡಿರುವುದು ಕುಹಕವೆಂದು ತಿಳಿದುಬರುತ್ತೆ. ಶ್ರೀಆಚಾರ್ಯರ ೩೭ ಗ್ರಂಥಗಳಲ್ಲಿ ೧೪ ಗ್ರಂಥಗಳಲ್ಲಿ ಮಾತ್ರ ಖಂಡನರೂಪ ಗ್ರಂಥಗಳನ್ನು ಬರೆದಿರುತ್ತಾರೆ. ಈ ರೀತಿಯ ವಿಶ್ವತೋಮುಖ ಪ್ರತಿಭೆಯನ್ನು ಬೇರೆ ಯಾವ ಮತಾಚಾರ್ಯರಲ್ಲಿ ನಾವು ಕಾಣಲಾಗದು.

## ಶ್ರೀಮದಾಚಾರ್ಯರರ ಬಗೆಗಿನ ಸ್ತೋತ್ರಗಳು

### ಅ) ವೇದಗಳಲ್ಲಿ – ಹನುಮ, ಭೀಮ, ಮಧ್ವಾವತಾರ ಸ್ತುತಿ

೧. ಋಗ್ವೇದ (೮–೨–೧೭)
ವಾಯುರಸ್ಮಾ ಉಪಾಯಂಥತ್ಪಿನಷ್ಟಿ ಸ್ಮಾಕುನನ್ನಾಮಾ ।
ಕೇಶೀವಿಷಸ್ಯ ಪಾತ್ರೇಣ ಯದ್ರುದ್ರೇಣಪಿಬತ್ಸಹ ॥

೨. ಋಗ್ವೇದ – ೮ನೇ ಅಷ್ಟಕ
ಇದಂತೇಪಾತ್ರಂ ಸನವಿತ್ತಮಿಂದ್ರಪಿಭಾಸೊಮಮೇ ನಾಶತಕ್ರತೋ ।
ಪೂರ್ಣ ಆಹವೋ ಮದಿರಸ್ಯ ಮಧ್ವೇಯಂ ವಿಶ್ವಇದಭಿಹಾರ್ಯಂತಿದೇವಾಃ ॥

೩. ಶೃತಿ – ಸರ್ವಂ ಸಪೋತಮಶ್ನಾತಿ ಸ್ವದಿತಂಮಾತರಿಶ್ವನಾ ॥

೪. ಮರುತ್ಸೂಕ್ತಃ
ಮಧ್ಯೋ ಓನಾಮ ಮಾರುತಂ ಯಜತ್ರಾಃ ಪ್ರಜ್ಞೇಷುಶವಸಾಮದಂತಿ ।
ಪಠೇಜಯಂತಿ ರೋದನೇಚೇ ದುರ್ವೀಪಿನ್ವಂತ್ಯುತ್ಸಂಯದಯಾಸುರುಗ್ರಾಃ ॥

೫. ಪವಮಾನಸೂಕ್ತ
ಅಜಿತಯೇಽಹತಯೇ ಪವಸ್ವಸ್ವಸ್ತಯೇ ಸರ್ವತಾತಯೇ ಬೃಹತೇ ।
ತದುಶಂತಿ ವಿಶ್ವಾ ಇಮೇ ಸಖಾಯಸ್ತದಹಂವದ್ಮಿ ಪವಮಾನಸೋಮ ॥

೬. ಶೃತಿ – ಮನ್ಯುಸೂಕ್ತ
ವಿಷ್ಣೋಃ ಪದೇ ಪರಮೇ ಮಧ್ವಉತ್ಸಃ ।



೭. ತೃತೀಯಮಸ್ಯ ಮುಖಭಾಸ್ಯ ದೋಹಸೇ ।
ದಶಪ್ರಮತಿಂ ಜನಯಂತ ಯೋಷಣಃ ॥

### ಆ) ಪುರಾಣಗಳಲ್ಲಿ

೧. ಹರಿವಂಶ
ವಾಯೋರ್ದಿವ್ಯಾನಿ ರೂಪಾಣಿ_____ ।
ಹನೂಮಾನಿತಿ ವಿಖ್ಯಾತೋ ರಾಮಕಾರ್ಯಧುರಂಧರಃ ।
ಸವಾಯುರ್ಭೀಮಸೇನೋಽಭೂತ್_____ ॥
ಯತಿರೂಪಧರೋವಾಯುರ್ಭವಿಷ್ಯತಿ ನ ಸಂಶಯಃ ॥

೨. ಕೂರ್ಮಪುರಾಣ
____ ಇತ್ಯಜ್ಞಪ್ತೋಭಗವತಾ ಕಲೌ ವಾಯುರ್ಭವಿಷ್ಯತಿ ।
ಮಧ್ವನಾಮಾ ಯತಿರಸೌ ____

೩. ಸ್ಕಾಂದಪುರಾಣ
ವಾಯುಸ್ತು ಯತಿರೂಪೇಣ ____ ।
ಸದಶಪ್ರಮತಿರ್ಭೂತ್ವಾ ಕಲೌಧರ್ಮಾನ್ವದಿಷ್ಯತಿ ॥

೪. ಜ್ಯೋತಿಷ್ಯಶಾಸ್ತ್ರ (ಬ್ರಹ್ಮನಾಡಿ)
ಅದ್ವೈತವ್ಯಾಕುಲೇ ಲೋಕೇ ಮಧ್ವಾಖ್ಯೋ ಬ್ರಾಹ್ಮಣೋತ್ತಮಃ
ವಿಷ್ಣುಭಕ್ತ್ಯಾದಿಸಂಪೂರ್ಣಃ ದ್ವೈತಶಾಸ್ತ್ರಪ್ರವರ್ತಕಃ ॥
ಸರ್ವೋತ್ತಮತ್ವಂ ಶ್ರೀವಿಷ್ಣೋಃ ಸ್ಥಾಪಯಿಷ್ಯತಿ ಸರ್ವಶಃ ।
ಯೋಗಿವರ್ಯೋಸ್ಸ ಮಧ್ವಾಖ್ಯೋ ಗುರುಸ್ಸತ್ಯಸ್ಯಕಾರಕಃ ॥

### ಇ) ಟೀಕಾ ಟಿಪ್ಪಣಿಕಾರರಿಂದ ಸ್ತುತಿ

೧. ವಿಷ್ಣುತೀರ್ಥರು (ಆಚಾರ್ಯರ ತಮ್ಮಂದಿರು)
೧.೧ ಸನ್ಯಾಸ ಪದ್ಧತಿ
ಆನಂದತೀರ್ಥಾಖ್ಯಮುನಿಂ ಸುವಿದ್ಯಂ
ವಾಯುಂ ಕಲೌ ದಸ್ಯುವಿಷೇಣ ಸನ್ನಾನ್ ॥
ಉಜ್ಜೀವಯಾನಂ ಹರಿಪಾದಪದ್ಮ
ಸುಧಾರಸೇನ್ನೈವ ಸತೋ ಹಿ ನೌಮಿ ॥

೨. ಪದ್ಮನಾಭತೀರ್ಥರು

೨.೧ ಸನ್ನ್ಯಾಯರತ್ನಾವಲಿ

ಶ್ರೀಮದಾನಂದತೀರ್ಥಾಖ್ಯಾನ್ ಗುರೂನ್ ವಿದ್ಯಾದಿವಾಕರಾನ್ ।
ವಂದೇ ಕುದೃಷ್ಟಿದುರ್ಬೋಧವ್ಯಾಸಸಿದ್ಧಾಂತದೀಪಕಾನ್ ॥

೩. ನರಹರಿತೀರ್ಥರು

೩.೧ ಗೀತಾಭಾಷ್ಯಟೀಕಾ

------

ವಾಚಾ ಯದ್ವತ್ ಸ್ವದೋಷ್ಣಾ ಸ ಪುನರಿಹ ಕಲೌ ಕೃಷ್ಣಗೀತಾಸುಭಾಷ್ಯಂ
ಚಕ್ರೇ ಭೂಚಕ್ರಗಸ್ತಂ ಶರಣಮಿಹಮಗಾಂ ಶ್ರೀಮದಾನಂದತೀರ್ಥಂ

೪. ಶ್ರೀಮಜ್ಜಯತೀರ್ಥರು (ಟೀಕಾಚಾರ್ಯರು)

೪.೧ ವಿಷ್ಣುತತ್ತ್ವವಿನಿರ್ಣಯ

ಲಸತು ಶ್ರೀಮದಾನಂದತೀರ್ಥೇಂದುರ್ನೋಹೃದಂಬರೇ ।
ಯದ್ವಚಶ್ಚಂದ್ರಿಕಾ ಸ್ವಾಂತಸಂತಾಪಂ ವಿನಿಕೃಂತತಿ ॥

೪.೨ ಶ್ರೀಮನ್ನ್ಯಾಯಸುಧಾ

ವ್ಯಾಪ್ತಿರ್ಯಸ್ಯನಿಜೇ ನಿಜೇನ ಮಹಸಾ ಪಕ್ಷೇ ಸಪಕ್ಷೇ ಸ್ಥಿತಿಃ
ವ್ಯಾವೃತ್ತಿಶ್ಚ ವಿಪಕ್ಷತೋಽಥ ವಿಷಯೇ ಸಕ್ತಿರ್ನ ವೈ ಬಾಧಿತೇ ।
ನೈವಾಸ್ತಿ ಪ್ರತಿಪಕ್ಷಯುಕ್ತಿರತುಲಂ ಶುದ್ಧಂ ಪ್ರಮಾಣಂ ಸ ಮೇ
ಭೂಯಾತ್ತತ್ವವಿನಿರ್ಣಯಾಯ ಭಗವಾನಾನಂದತೀರ್ಥೋ ಮುನಿಃ ॥

೪.೩ ನ್ಯಾಯವಿವರಣ

ನಮಾಮಿ ಶ್ರೀಮದಾನಂದತೀರ್ಥಾಚಾರ್ಯಂಪರಂಗುರುಮ್
ಯಸ್ಯ ವಾಣೀ ಕೃಪಾಣೀಯಂ ನಿಕೃಂತತಿ ಭವಾಟವೀಮ್ ॥

೪.೪ ಪ್ರಮೇಯದೀಪಿಕಾ

ನಮಾಮಿ ವ್ಯಾಸದಾಸಸ್ಯ ಪೂರ್ಣಬುದ್ಧೇಃ ಪದಾಂಬುಜೇ ।
ನತಾಮರಶಿರೋರತ್ನರಾಜನೀರಾಜಿತೇ ಸದಾ ॥

೫. ವ್ಯಾಸರಾಜರು (ಚಂದ್ರಿಕಾಚಾರ್ಯರು)

೫.೧ ತರ್ಕತಾಂಡವ

ಶ್ರೀಶಪಾದಾಂಬುಜಾಸಕ್ತಃ ಕರುಣಾಪೂರಶೀತಲಃ ।
ಮಧ್ವಾಖ್ಯೋ ಮರುದಂಶೋ ಮೇ ಸಂತಾಪಾನ್ ಹಂತು ಸಂತಮ್ ॥



೬. ಶ್ರೀವಾದಿರಾಜರು

೬.೧ ಯುಕ್ತಿಮಲ್ಲಿಕಾ

ಸ್ವಕೋಶಸ್ಥ ಪದಾರ್ಥಾಖ್ಯವಿತ್ತೈರ್ದತ್ತೈಃ ಸ ಏವ ತತ್ ।
ವಿದ್ರಾವಯೇದ್ಧಿ ದಾರಿದ್ರ್ಯಂ ದದ್ಯಾನ್ಮಧ್ವೋ ಗತಿಂ ಚ ಮೇ ॥

೬.೨ ರುಗ್ಮಿಣೀಶವಿಜಯ

ಸತ್ಸಂಘಮಾನಸಸರೋವರಮಧ್ಯವರ್ತೀ
ಕೃಷ್ಣಾಂಘ್ರಿಚಾರುಕಮಲಾರ್ಪಿತಚಿತ್ತವೃತ್ತಿಃ ।
ಶಾಸ್ತ್ರಾತಿ ಮಂಜುಪದರಂಜಿತರಮ್ಯಸಂಸ-
ದಾಸ್ಮಾಕಹೃತ್ಸರಸಿಜೇಽಸ್ತು ಸ ಮಧ್ವಹಂಸಃ ॥

೭. ಶ್ರೀರಾಘವೇಂದ್ರತೀರ್ಥರು

೭.೧ ನ್ಯಾಯಸುಧಾಪರಿಮಳ

ವಿಶ್ವಂ ಯಸ್ಯ ವಶೇ ನಿತ್ಯಮನಿಶಂ ಶಂಕರಾದಿಕಮ್ ।
ತಸ್ಯ ವಾಯೋಸ್ತೃತೀಯಾಂಶಮಾಶ್ರಯೇ ಶಮವಾಪ್ತಯೇ ॥

೭.೨ ತಾತ್ಪರ್ಯಚಂದ್ರಿಕಾ

ಶರ್ವಾದಿಸರ್ವಗೀರ್ವಾಣನಿರ್ವಾಣಗತಿಹೇತವಃ ।
ಪೂರ್ಣಪ್ರಜ್ಞಪದಾಂಭೋಜಪಾಂಸವಃ ಪಾಂತು ನಃ ಸದಾ ॥

೮. ಶ್ರೀ ಸತ್ಯಧರ್ಮತೀರ್ಥರು

೮.೧ ಸುಂದರಕಾಂಡ ಟಿಪ್ಪಣ

ಆರಾಮಧಾಮಶ್ರೀರಾಮರಾಮಾಂ ದ್ರಷ್ಟುಂ ಗತೋಂಽಬುಧೇಃ ।
ಪಾರಂ ಸ ಪಾರಯೇದೇತತ್ಕಾಂಡಕಾಂಡನಿಧಿಂ ಮಯಾ ॥

೯. ಶ್ರೀ ರಘೂತ್ತಮತೀರ್ಥರು

೯.೧ ಬೃಹದಾರಣ್ಯಕೋಪನಿಷದ್ಭಾವಬೋಧ

ನಿಖಿಲಾದ್ವೈತಸಿದ್ಧಾಂತಪ್ರಾಪ್ತಾಜ್ಞಾನವಿನಾಶಕಃ ।
ಶ್ರೀಮದಾಚಾರ್ಯಸೂರ್ಯೋಽಯಂ ದದ್ಯಾತ್ತತ್ತ್ವಪ್ರಕಾಶನಮ್ ॥

೧೦. ಶ್ರೀ ವಿಜಯೀಂದ್ರತೀರ್ಥರು

೧೦.೧ ತತ್ತ್ವೋದ್ಯೋತಟೀಕಾಟಿಪ್ಪಣೀ

ಬ್ರಹ್ಮವಿನ್ಮುಖರಂಗಸ್ಥಾಂ ಮಧ್ವ ತೇ ವಾಂಙ್ನಟೀಂ ಪರಾನ್ ।
ವಿಚಿತ್ರಪದವಿನ್ಯಾಸೈರ್ಮೋಹಯಂತೀಂ ಭಜೇಽನ್ವಹಮ್ ॥

೧೧. ಶ್ರೀತ್ರಿವಿಕ್ರಮಪಂಡಿತಾಚಾರ್ಯರು

೧೧.೧ ಶ್ರೀಹರಿವಾಯುಸ್ತುತಿ

ಶ್ರೀಮದ್ವಿಷ್ಣ್ವಂಘ್ರಿನಿಷ್ಠಾತಿಗುಣಗುರುತಮಶ್ರೀಮದಾನಂದತೀರ್ಥ
ತ್ರೈಲೋಕ್ಯಾಚಾರ್ಯಪಾದೋಜ್ಜ್ವಲಜಲಜಲಸತ್ಪಾಂಸವೋಽಸ್ಮಾನ್ ಪುನಂತು।

------

೧೨. ನಾರಾಯಣಪಂಡಿತಾಚಾರ್ಯರು

೧೨.೧ ಸುಮಧ್ವವಿಜಯ

ಅಪಿ ತ್ರಿಲೋಕ್ಯಾ ಬಹಿರುಲ್ಲಸಂತೀ
ತಮೋ ಹರಂತೀ ಮುಹುರಾಂತರಂ ಚ ।
ದಿಶ್ಯಾದ್ ದೃಶಂ ನೋ ವಿಶದಾಂ ಜಯಂತೀ
ಮಧ್ವಸ್ಯ ಕೀರ್ತಿರ್ದಿನನಾಥದೀಪ್ತಿಮ್ ॥ (ಸ. ೧ – ೩)

ನಮಸ್ತೇ ಪ್ರಾಣೇಶ ಪ್ರಣತವಿಭವಾಯಾವನಿಮಗಾ
ನಮಃ ಸ್ವಾಮಿನ್ ರಾಮಪ್ರಿಯತಮ ಹನೂಮನ್ ಗುರುಗುಣ ।
ನಮಸ್ತುಭ್ಯಂ ಭೀಮ ಪ್ರಬಲತಮ ಕೃಷ್ಣೇಷ್ಟ ಭಗವನ್
ನಮಃ ಶ್ರೀಮನ್ಮಧ್ವ ಪ್ರದಿಶ ಸುದೃಶಂ ನೋ ಜಯಜಯ ॥

(ಸ. ೧೬ – ೫೭)

೧೨.೨ ಸಂಗ್ರಹರಾಮಾಯಣ

ಸ್ವಾಂತಸ್ಥಾನಂತಶಯ್ಯಾಯ ಪೂರ್ಣಜ್ಞಾನರಸಾರ್ಣವೇ ।
ಉತ್ತುಂಗವಾಕ್ತರಂಗಾಯ ಮಧ್ವದುಗ್ಧಾಬ್ಧಯೇ ನಮಃ ॥

೧೨.೩ ನಯಚಂದ್ರಿಕಾ

ನಮೋ ವೇದಾಂತರಾದ್ಧಾಂತಸೂಕ್ತಿರತ್ನಾಕರಾತ್ಮನೇ ।
ಶ್ರೀಮದಾನಂದತೀರ್ಥಾಖ್ಯಭಗವದ್ದುಗ್ಧಸಿಂಧವೇ ॥

ಹೀಗೆ ಅನೇಕಾನೇಕ ಮಹನೀಯರ ಶ್ರೀಮದಾಚಾರ್ಯರ ಸ್ತುತಿರೂಪ ಶ್ಲೋಕಗಳು ಇರುವುವು.

॥ ಶ್ರೀಮಧ್ವೇಶಾರ್ಪಣಮಸ್ತು ॥



# ಶ್ರೀ ಸರ್ವಮೂಲ ಗ್ರಂಥಗಳ ಆದ್ಯಂತ ಶ್ಲೋಕಗಳು

## ೧. ಬ್ರಹ್ಮಸೂತ್ರಭಾಷ್ಯಮ್

ಆದಿ→ ನಾರಾಯಣಂ ಗುಣೈಃ ಸರ್ವೈರುದೀರ್ಣಂ ದೋಷವರ್ಜಿತಮ್ ।
ಜ್ಞೇಯಂ ಗಮ್ಯಂ ಗುರೂಂಶ್ಚಾಪಿ ನತ್ವಾ ಸೂತ್ರಾರ್ಥ ಉಚ್ಯತೇ ॥

ಅಂತ್ಯ→ ಜ್ಞಾನಾನಂದಾದಿಭಿಃ ಸರ್ವೈರ್ಗುಣೈಃ ಪೂರ್ಣಾಯ ವಿಷ್ಣವೇ ।
ನಮೋಽಸ್ತು ಗುರವೇ ನಿತ್ಯಂ ಸರ್ವಥಾಽತಿಪ್ರಿಯಾಯ ಮೇ ॥

ಯಸ್ಯ ತ್ರೀಣ್ಯುದಿತಾನಿ ವೇದವಚನೇ ರೂಪಾಣಿ ದಿವ್ಯಾನ್ಯಲಂ
ಬಟ್ ತದ್ದರ್ಶತಮಿತ್ಥಮೇವ ನಿಹಿತಂ ದೇವಸ್ಯ ಭರ್ಗೋ ಮಹತ್ ।
ವಾಯೋ ರಾಮವಚೋನಯಂ ಪ್ರಥಮಕಂ ಪೃಕ್ಷೋ ದ್ವಿತೀಯಂ ವಪು-
ರ್ಮಧ್ವೋ ಯತ್ತು ತೃತೀಯಕಂ ಕೃತಮಿದಂ ಭಾಷ್ಯಂ ಹರೌ ತೇನ ಹಿ ॥

ನಿತ್ಯಾನಂದೋ ಹರಿಃ ಪೂರ್ಣೋ ನಿತ್ಯದಾ ಪ್ರೀಯತಾಂ ಮಮ ।
ನಮಸ್ತಸ್ಮೈ ನಮಸ್ತಸ್ಮೈ ನಮಸ್ತಸ್ಮೈ ಚ ವಿಷ್ಣವೇ ॥

## ೨. ಅಣುಭಾಷ್ಯಮ್

ಆದಿ→ ನಾರಾಯಣಂ ಗುಣೈಸ್ಸರ್ವೈರುದೀರ್ಣಂ ದೋಷವರ್ಜಿತಮ್ ।
ಜ್ಞೇಯಂ ಗಮ್ಯಂ ಗುರೂಂಶ್ಚಾಪಿ ನತ್ವಾ ಸೂತ್ರಾರ್ಥ ಉಚ್ಯತೇ ॥

ಅಂತ್ಯ→ ನಮೋ ನಮೋಽಶೇಷದೋಷದೂರಪೂರ್ಣಗುಣಾತ್ಮನೇ ।
ವಿರಿಂಚಿಶರ್ವಪೂರ್ವೇಡ್ಯವಂದ್ಯಾಯ ಶ್ರೀವರಾಯ ತೇ ॥

## ೩. ಅನುವ್ಯಾಖ್ಯಾನಮ್

ಆದಿ→ ನಾರಾಯಣಂ ನಿಖಿಲಪೂರ್ಣಗುಣೈಕದೇಹಂ
ನಿರ್ದೋಷಮಾಪ್ಯತಮಮಪ್ಯಖಿಲೈಃ ಸುವಾಕ್ಯೈಃ ।
ಅಸ್ಯೋದ್ಭವಾದಿದಮಶೇಷವಿಶೇಷತೋಽಪಿ
ವಂದ್ಯಂ ಸದಾ ಪ್ರಿಯತಮಂ ಮಮ ಸನ್ನಮಾಮಿ ॥
ತಮೇವ ಶಾಸ್ತ್ರಪ್ರಭವಂ ಪ್ರಣಮ್ಯ ಜಗದ್ಗುರೂಣಾಂ ಗುರುಮಂಜಸೈವ ।
ವಿಶೇಷತೋ ಮೇ ಪರಮಾಖ್ಯವಿದ್ಯಾವ್ಯಾಖ್ಯಾಂ ಕರೋಮ್ಯನ್ವಪಿ ಚಾಹಮೇವ ॥

ಅಂತ್ಯ→ ನಮೋ ನಮೋಽಶೇಷವಿಶೇಷಪೂರ್ಣಗುಣೈಕಧಾಮ್ನೇ ಪುರುಷೋತ್ತಮಾಯ ।
ಭಕ್ತಾನುಕಂಪಾದತಿಶುದ್ಧಸಂವಿದ್ಧಾತ್ರೇಽನುಪಾಧಿಪ್ರಿಯಸದ್ಗುಣಾತ್ಮನೇ ॥
ಯಸ್ಯ ತ್ರೀಣ್ಯುದಿತಾನಿ......ತೃತೀಯಮೇತದಮುನಾ ಗ್ರಂಥಃ ಕೃತಃ ಕೇಶವೇ ॥
ನಿಶ್ಶೇಷದೋಷರಹಿತ ಕಲ್ಯಾಣಾಖಿಲಸದ್ಗುಣ ।
ಭೂತಿಸ್ಸ್ವಯಂಭುವಶರ್ವಾದಿವಂದ್ಯಂ ತ್ವಾಂ ನೌಮಿ ಮೇ ಪ್ರಿಯಮ್ ॥

## ೪. ನ್ಯಾಯವಿವರಣಮ್

ಆದಿ→ ಚೇತನಾಚೇತನಜಗನ್ನಿಯಂತ್ರೇಽಶೇಷಸಂವಿದೇ ।
ನಮೋ ನಾರಾಯಣಾಯಾಜಶರ್ವಶಕ್ರಾದಿವಂದಿತ ॥
ಕೃತ್ವಾ ಭಾಷ್ಯಾನುಭಾಷ್ಯೇಽಹಮಪಿ ವೇದಾರ್ಥಸತ್ಪತೇಃ ।
ಕೃಷ್ಣಸ್ಯ ಸೂತ್ರಾನುವ್ಯಾಖ್ಯಾಸನ್ನ್ಯಾಯವಿವೃತಿಂ ಸ್ಫುಟಮ್ ॥
ಕರೋಮಿ ಮಂದಬುದ್ಧೀನಾಂ ಬುಧಾನಾಂ ಚೋಪಕಾರಿಕಾಮ್ ।
ಪ್ರೀತ್ಯೈ ತಸ್ಯೈವ ದೇವಸ್ಯ ತತ್ಪ್ರಸಾದಪುರಃಸರಃ ॥

ಅಂತ್ಯ→ ನಮೋಽಜ(ಬ್ಜ)ಭವಭೂರ್ಯರ್ಕಕ್ಷಪುರಃಸರಸುರಾಶ್ರಯ ।
ನಾರಾಯಣಾರಣಂ ಮಹ್ಯಂ ಮಾಪತೇ ಪ್ರೇಯಸಾಂ ಪ್ರಿಯ ॥

## ೫. ಗೀತಾಭಾಷ್ಯಮ್

ಆದಿ→ ದೇವಂ ನಾರಾಯಣಂ ನತ್ವಾ ಸರ್ವದೋಷವಿವರ್ಜಿತಮ್ ।
ಪರಿಪೂರ್ಣಂ ಗುರೂಂಶ್ಚಾನ್ ಗೀತಾರ್ಥಂ ವಕ್ಷ್ಯಾಮಿ ಲೇಶತಃ ॥

ಅಂತ್ಯ→ ಪೂರ್ಣಾದೋಷಮಹಾವಿಷ್ಣೋರ್ಗೀತಾಮಾಶ್ರಿತ್ಯ ಲೇಶತಃ ।
ನಿರೂಪಣಂ ಕೃತಂ ತೇನ ಪ್ರೀಯತಾಂ ಮೇ ಸದಾ ವಿಭುಃ ॥

## ೬. ಗೀತಾತಾತ್ಪರ್ಯನಿರ್ಣಯಃ

ಆದಿ→ ಸಮಸ್ತಗುಣಸಂಪೂರ್ಣಂ ಸರ್ವದೋಷವಿವರ್ಜಿತಮ್ ।
ನಾರಾಯಣಂ ನಮಸ್ಕೃತ್ಯ ಗೀತಾತಾತ್ಪರ್ಯಮುಚ್ಯತೇ ॥

ಅಂತ್ಯ→ ನಮಸ್ತೇ ವಾಸುದೇವಾಯ ಪ್ರಿಯಸಾಂ ಮೇ ಪ್ರಿಯೋತ್ತಮ ।
ಸಮಸ್ತಗುಣಸಂಪೂರ್ಣನಿರ್ದೋಷಾನಂದದಾಯಿನೇ ॥

## ೭. ಮಹಾಭಾರತತಾತ್ಪರ್ಯನಿರ್ಣಯಃ

ಆದಿ→ ನಾರಾಯಣಾಯ ಪರಿಪೂರ್ಣಗುಣಾರ್ಣವಾಯ
ವಿಶ್ವೋದಯಸ್ಥಿತಿಲಯೋನ್ನಿಯತಿಪ್ರದಾಯ ।
ಜ್ಞಾನಪ್ರದಾಯ ವಿಬುಧಾಸುರಸೌಖ್ಯದುಃಖ-
ಸತ್ಕಾರಣಾಯ ವಿತತಾಯ ನಮೋ ನಮಸ್ತೇ ॥
ಆನಂದತೀರ್ಥಾಖ್ಯಮುನಿಃ ಸುಪೂರ್ಣಪ್ರಜ್ಞಾಭಿಧೋ ಗ್ರಂಥಮಿಮಂ ಚಕಾರ ।
ನಾರಾಯಣೇನಾಭಿಹಿತೋ ಬದರ್ಯಾಂ ತಸ್ಯೈವ ಶಿಷ್ಯೋ ಜಗದೇಕಭರ್ತುಃ ॥
ತಸ್ಮಾದಯಂ ಗ್ರಂಥವರೋಽಖಿಲೋರುಧರ್ಮಾದಿಮೋಕ್ಷಾಂತಪುಮರ್ಥಹೇತುಃ ।
ಕಿಂ ವೋದಿತೈರಸ್ಯ ಗುಣೈಃ ಸಮಸ್ತೈರ್ನಾರಾಯಣಃ ಪ್ರೀತಿಮುಪೈತ್ಯತೋಽಲಮ್ ॥

ಅಂತ್ಯ→ ಯಸ್ಯ ತ್ರೀಣ್ಯುದಿತಾನಿ...........ಗ್ರಂಥಃ ಕೃತಃ ಕೇಶವೇ ॥
ಯಃ ಸರ್ವಗುಣಸಂಪೂರ್ಣಃ ಸರ್ವದೋಷವಿವರ್ಜಿತಃ ।
ಪ್ರೀಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಃ ಸುಹೃತ್ ॥



## ೮. ಯಮಕಭಾರತಮ್

ಆದಿ→ ಧ್ಯಾಯೇತ್ತಂ ಪರಮಾನಂದಂ ಯನ್ಮಾತಾ ಪತಿಮಯದಪರಮಾನಂದಮ್ ।
ಉಜ್ಝಿತಪರಮಾನಂ ದಂಪತ್ಯಾದ್ಯಾದ್ಯಾಶ್ರಮೈಃ ಸದೈವ ಪರಮಾನಂದಮ್ ॥

ಅಂತ್ಯ→ ಇತಿ ನಾರಾಯಣನಾಮಾ ಸುಖ(ಕ)ತೀರ್ಥಪೂಜಿತಃ ಸುರಾಯಣನಾಮಾ ।
ಪೂರ್ಣಗುಣೈರಧಿಕಜ್ಞಾನೇಚ್ಛಾಶ(ಭ)ಕ್ತಿಭಿಃ ಸ್ವಧಿಕಪೂರ್ಣಃ ॥

## ೯. ಭಾಗವತತಾತ್ಪರ್ಯನಿರ್ಣಯಃ

ಆದಿ→ ಸೃಷ್ಟಿಸ್ಥಿತ್ಯಪ್ಯಯೇಹಾನಿಯತಿದೃಶಿತಮೋಬಂಧಮೋಕ್ಷಾಶ್ಚ ಯಸ್ಮಾತ್ ।
ಅಸ್ಯ ಶ್ರೀಬ್ರಹ್ಮರುದ್ರಪ್ರಭೃತಿಸುರನರದ್ವೇಶಶತ್ರಾತ್ಮಕಸ್ಯ ॥
ವಿಷ್ಣೋರ್ವ್ಯಸ್ತಾಃ ಸಮಸ್ತಾಃ ಸಕಲಗುಣನಿಧಿಃ ಸರ್ವದೋಷವ್ಯಪೇತಃ ।
ಪೂರ್ಣಾನಂದೋಽವ್ಯಯೋ ಯೋ ಗುರುರಪಿ ಪರಮಶ್ಚಿಂತಯೇ ತಂ ಮಹಾಂತಮ್ ॥

ಅಂತ್ಯ→ ನಿತ್ಯಾದೋಷಸ್ವರೂಪಾಯ ಗುಣಪೂರ್ಣಾಯ ಸರ್ವದಾ ।
ನಾರಾಯಣಾಯ ಹರಯೇ ನಮಃ ಪ್ರೇಷ್ಠತಮಾಯ ತೇ ॥

## ೧೦. ಋಗ್ಭಾಷ್ಯಮ್

ಆದಿ→ ನಾರಾಯಣಂ ನಿಖಿಲಪೂರ್ಣಗುಣಾರ್ಣಮುಚ್ಚ-
ಸೂರ್ಯಾಮಿತದ್ಯುತಿಮಶೇಷನಿರಸ್ತದೋಷಮ್ ।
ಸರ್ವೇಶ್ವರಂ ಗುರುಮಜೇಶನುತಂ ಪ್ರಣಮ್ಯ
ವಕ್ಷ್ಯಾಮ್ಯೃಗರ್ಥಮತಿತುಷ್ಟಿಕರಂ ತದಸ್ಯ ॥

ಅಂತ್ಯ→ ವರ್ತಾಽಭಿಗಂತಾ ತರುತಾ ಜೇತಾ ವಾಽಸ್ಯ ನ ಹಿ ಕ್ವಚಿತ್ ।
ಯುದ್ಧಂ ಮಹಾಧನಂ ತ್ವರ್ಭಂ ಪ್ರಸಿದ್ಧಂ ಧನಮೇವ ಹಿ ॥

## ೧೧. ಈಶಾವಾಸ್ಯೋಪನಿಷದ್ಭಾಷ್ಯಮ್

ಆದಿ→ ನಿತ್ಯಾನಿತ್ಯಜಗದ್ಧಾತ್ರೇ ನಿತ್ಯಾಯ ಜ್ಞಾನಮೂರ್ತಯೇ ।
ಪೂರ್ಣಾನಂದಾಯ ಹರಯೇ ಸರ್ವಯಜ್ಞಭುಜೇ ನಮಃ ॥

ಅಂತ್ಯ→ ಪೂರ್ಣಶಕ್ತಿಚಿದಾನಂದಶ್ರೀತೇಜಃಸ್ಪಷ್ಟಮೂರ್ತಯೇ ।
ಮಮಾಭ್ಯಧಿಕಮಿತ್ರಾಯ ನಮೋ ನಾರಾಯಣಾಯ ತೇ ॥

## ೧೨. ತಲವಕಾರೋಪನಿಷದ್ಭಾಷ್ಯಮ್

ಆದಿ→ ಅನಂತಗುಣಪೂರ್ಣತ್ವದಗಮ್ಯಾಯ ಸುರೈರಪಿ ।
ಸರ್ವೇಷ್ಟದಾತ್ರೇ ದೇವಾನಾಂ ನಮೋ ನಾರಾಯಣಾಯ ತೇ ॥

ಅಂತ್ಯ→ ಯಶ್ಚಿದಾನಂದಸಚ್ಛಕ್ತಿಸಂಪೂರ್ಣೋ ಭಗವಾನ್ ಪರಃ ।
ನಮೋಽಸ್ತು ವಿಷ್ಣವೇ ತಸ್ಮೈ ಪ್ರೇಷ್ಠಾಯ ಪ್ರೇಯಸಾಂ ಚ ಮೇ ॥

## ೧೩. ಕಾಠಕೋಪನಿಷದ್ಭಾಷ್ಯಮ್

ಆದಿ→ ನಮೋ ಭಗವತೇ ತಸ್ಮೈ ಸರ್ವತಃ ಪರಮಾಯ ತೇ ।
ಸರ್ವಪ್ರಾಣಿಹೃದಿಸ್ಥಾಯ ವಾಮನಾಯ ನಮೋ ನಮಃ ॥

ಅಂತ್ಯ→ ನಮೋ ಭಗವತೇ ತಸ್ಮೈ ವಿಷ್ಣವೇ ಪ್ರಭವಿಷ್ಣವೇ ।
ಯಸ್ಯಾಹಮಾಪ್ತ ಆಪ್ತೇಭ್ಯೋ ಯೋ ಮ ಆಪ್ತತಮಃ ಸದಾ ॥

## ೧೪. ಷಟ್ಪ್ರಶ್ನೋಪನಿಷದ್ಭಾಷ್ಯಮ್

ಆದಿ→ ನಮೋ ಭಗವತೇ ತಸ್ಮೈ ಪ್ರಾಣಾದಿಪ್ರಭವಿಷ್ಣವೇ ।
ಅಮಂದಾನಂದಸಾಂದ್ರಾಯ ವಾಸುದೇವಾಯ ವೇಧಸೇ ॥

ಅಂತ್ಯ→ ನಮೋ ನಮೋऽಸ್ತು ಹರಯೇ ಪ್ರೇಷ್ಠಪ್ರೇಷ್ಠತಮಾಯ ತೇ ।
ಪರಮಾನಂದಸಂದೋಹಸಾಂದ್ರಾನಂದವಪುಷ್ಮತೇ ॥

## ೧೫. ಅಥರ್ವಣೋಪನಿಷದ್ಭಾಷ್ಯಮ್

ಆದಿ→ ಆನಂದಮಜರಂ ನಿತ್ಯಮಜಮಕ್ಷಯಮಚ್ಯುತಮ್ ।
ಅನಂತಶಕ್ತಿಂ ಸರ್ವಜ್ಞಂ ನಮಸ್ಯೇ ಪುರುಷೋತ್ತಮಮ್ ॥

ಅಂತ್ಯ→ ಪ್ರೀಯತಾಂ ಭಗವಾನ್ ಮಹ್ಯಂ ಪ್ರೇಷ್ಠ ಪ್ರೇಷ್ಠತಮಃ ಸದಾ ।
ಮಮ ನಿತ್ಯಂ ನಮಾಮ್ಯೇನಂ ಪರಮೋದಾರಸದ್ಗುಣಮ್ ॥

## ೧೬. ಮಾಂಡೂಕೋಪನಿಷದ್ಭಾಷ್ಯಮ್

ಆದಿ→ ಪೂರ್ಣಾನಂದಜ್ಞಾನಶಕ್ತಿಸ್ವರೂಪಂ ನಿತ್ಯಮವ್ಯಯಮ್ ।
ಚತುರ್ಧಾ ಸರ್ವಭೋಕ್ತಾರಂ ವಂದೇ ವಿಷ್ಣುಂ ಪರಂ ಪದಮ್ ॥

ಅಂತ್ಯ→ ಏಕೋऽಪಿ ನಿರ್ವಿಶೇಷೋऽಪಿ ಚತುರ್ಧಾ ವ್ಯವಹಾರಭಾಕ್ ।
ಯಸ್ತಂ ವಂದೇ ಚಿದಾತ್ಮಾನಂ ವಿಷ್ಣುಂ ವಿಶ್ವಾದಿರೂಪಿಣಮ್ ॥

## ೧೭. ತೈತ್ತಿರೀಯೋಪನಿಷದ್ಭಾಷ್ಯಮ್

ಆದಿ→ ಸತ್ಯಂ ಜ್ಞಾನಮನಂತಮಾನಂದಂ ಬ್ರಹ್ಮ ಸರ್ವಶಕ್ತ್ಯೇಕಮ್ ।
ಸರ್ವೈರ್ದೇವೈರೀಡ್ಯಂ ವಿಷ್ಣ್ವಾಖ್ಯಂ ಸರ್ವದೈಮಿ ಸುಪ್ರೇಷ್ಠಮ್ ॥

ಅಂತ್ಯ→ ಯಸ್ಯೋಚ್ಚೋऽಪಿ ಸಮೋ ವಾ ಕಶ್ಚಿನ್ನೈವಾಸ್ತ್ಯನಂತಸಚ್ಛಕ್ತೇಃ ।
ವಂದೇ ಪರಮೇಶಂ ಪ್ರೇಯಾಂಸಂ ಪ್ರೇಯಸಶ್ಚ ಮೇ ವಿಷ್ಣುಮ್ ॥



## ೧೮. ಛಾಂದೋಗ್ಯೋಪನಿಷದ್ಭಾಷ್ಯಮ್

ಆದಿ→ ಅತ್ಯುದ್ರಿಕ್ತವಿದೋಷಸತ್ಸುಖಮಹಾಜ್ಞಾನೈಕತಾನಪ್ರಭಾ-
ಸರ್ವಪ್ರಾಭವಭೋಗಶಕ್ತಿಬಲಸತ್ಸಾರಾತ್ಮದಿವ್ಯಾಕೃತಿಮ್ ।
ಸೃಷ್ಟಿಸ್ಥಾನನಿರೋಧನಿತ್ಯನಿಯತಿಜ್ಞಾನಪ್ರಕಾಶಾವೃತಿ-
ಧ್ವಾಂತಾಮೋಕ್ಷವಿಮೋಕ್ಷದಂ ಹರಿಮಜಂ ನಿತ್ಯಂ ಸದೋಪಾಸ್ಮಹೇ ॥

ಅಂತ್ಯ→ ಪೂರ್ಣಾನಂದಮಹೋದಧಿಃ ಪರತಮೋ ನಿತ್ಯಃ ಪರಸ್ಮಾತ್ ಸದಾ
ಸರ್ವಜ್ಞಃ ಸಕಲೇಶಿತಾ ಗುಣನಿಧಿರ್ನಿತ್ಯೋತ್ಸವಸ್ತದ್ವಿದಾಮ್ ।
ಸರ್ವಸ್ಮಾದಧಿಕಂ ಮಮ ಪ್ರಿಯತಮಃ ಸ್ವಿಷ್ಟಾದಪೀಷ್ಟೋತ್ತಮಃ
ಸರ್ವಸ್ಮಾಚ್ಚ ಹಿತಾತ್ ಸದಾ ಹಿತತಮಃ ಪ್ರೀತೋ ಭವೇನ್ಮೇ ಹರಿಃ ॥

ಆನಂದತೀರ್ಥ ಇತಿ ತು ಯಸ್ಯ ನಾಮ ದ್ವಿ(ತೃ)ತೀಯಕಮ್ ।
ಪೂರ್ಣಪ್ರಜ್ಞೇನ ತೇನೇದಂ ಕೃತಂ ಭಾಷ್ಯಂ ಹರೇಃ ಪ್ರಿಯಮ್ ॥

ನಿತ್ಯಾನಂದೋ ಹರಿಃ ಪೂರ್ಣೋ ಸರ್ವದಾ ಪ್ರೀಯತಾಂ ಮಮ ।
ನಮಸ್ತಸ್ಮೈ ನಮಸ್ತಸ್ಮೈ ನಮಸ್ತಸ್ಮೈ ಚ ವಿಷ್ಣವೇ ॥

## ೧೯. ಬೃಹದಾರಣ್ಯಕೋಪನಿಷದ್ಭಾಷ್ಯಮ್

ಆದಿ→ ಪ್ರಾಣಾದೇರೀಶಿತಾರಂ ಪರಮಸುಖನಿಧಿಂ ಸರ್ವದೋಷವ್ಯಪೇತಂ
ಸರ್ವಾಂತಸ್ಥಂ ಸುಪೂರ್ಣಂ ಪ್ರಕೃತಿಪತಿಮಜಂ ಸರ್ವಬಾಹ್ಯಂ ಸುನಿತ್ಯಮ್ ।
ಸರ್ವಜ್ಞಂ ಸರ್ವಶಕ್ತಿಂ ಸುರಮುನಿಮನುಜಾದ್ಯೈಃ ಸದಾ ಸೇವ್ಯಮಾನಂ
ವಿಷ್ಣುಂ ವಂದೇ ಸದಾऽಹಂ ಸಕಲಜಗದನಾದ್ಯಂತಮಾನಂದದಂ ತಮ್ ॥

ಅಂತ್ಯ→ ನಿತ್ಯಾನಂದಮನೌಪಮಂ ಪರಮಜಂ ಸರ್ವತ್ರಗಂ ಸುಸ್ಥಿರಂ
ಸರ್ವಜ್ಞಂ ಪ್ರತಿಬೋಧಮಾತ್ರಮಮಲಂ ಪೂರ್ಣಂ ಗುಣೈರಚ್ಯುತೈಃ ।
ವಿಶ್ವೋತ್ಪತ್ತಿಲಯಸ್ಥಿತಿಪ್ರಮತಿಸನ್ಮೋಕ್ಷೈ ಪರಂ ಕಾರಣಂ
ಪ್ರೇಷ್ಠಂ ಮೇ ಸತತಂ ಪ್ರಿಯಾತ್ಪ್ರಿಯತಮಂ ನಿತ್ಯಂ ಸದೋಪಾಸ್ಮಹೇ ॥

ಪೂರ್ಣಾಗಣ್ಯಗುಣೋದಾರಧಾಮ್ನೇ ನಿತ್ಯಾಯ ವೇಧಸೇ ।
ಅಮಂದಾನಂದಸಾಂದ್ರಾಯ ಪ್ರೇಯಸೇ ವಿಷ್ಣವೇ ನಮಃ ॥

## ೨೦. ಐತರೇಯೋಪನಿಷದ್ಭಾಷ್ಯಮ್

ಆದಿ→ ನಾರಾಯಣಂ ನಿಖಿಲಪೂರ್ಣಗುಣೈಕದೇಹಂ
ಸರ್ವಜ್ಞಮಚ್ಯುತಮಪೇತಸಮಸ್ತದೋಷಮ್ ।
ಪ್ರಾಣಸ್ಯ ಸರ್ವಚಿದಚಿತ್ಪರಮೇಶ್ವರಸ್ಯ
ಸಾಕ್ಷಾದಧೀಶ್ವರಮಿಯಾಂ ಶರಣಂ ರಮೇಶಮ್ ॥

ಅಂತ್ಯ→ ಸರ್ವೈಶ್ಚ ವೈದಿಕಪದ್ಯೈರಪಿ ಲೋಕಶಬ್ದೈ-
ರ್ಮೇಘಾಗ್ನಿವಾರಿಧಿತಲಾದಿರವೈಶ್ಚ ಸರ್ವೈಃ ।
ಏಕೋಽಭಿಧೇಯಃ ಪರಿಪೂರ್ಣಗುಣಃ ಪ್ರಿಯೋಽಲಂ
ನಾರಾಯಣೋ ಮಮ ಸದೈವ ಸುತುಷ್ಟಿಮೇತು ॥
ಪೂರ್ಣಾಗಣ್ಯಗುಣೋದಾರಧಾಮ್ನೇ ನಿತ್ಯಾಯ ವೇಧಸೇ ।
ಅಮಂದಾನಂದಸಾಂದ್ರಾಯ ಪ್ರೇಯಸೇ ವಿಷ್ಣವೇ ನಮಃ ॥

## ೨೧. ತತ್ತ್ವಸಂಖ್ಯಾನಮ್

ಆದಿ→ ಸ್ವತಂತ್ರಮಸ್ವತಂತ್ರ ಚ ದ್ವಿವಿಧಂ ತತ್ತ್ವಮಿಷ್ಯತೇ ।
ಸ್ವತಂತ್ರೋ ಭಗವಾನ್ ವಿಷ್ಣುರ್ಭಾವಾಭಾವೌ ದ್ವಿಧೇತರತ್ ॥

ಅಂತ್ಯ→ ಸೃಷ್ಟಿಃ ಸ್ಥಿತಿಃ ಸಂಹೃತಿಶ್ಚ ನಿಯಮೋಽಜ್ಞಾನಭೋಧನೇ ।
ಬಂಧೋ ಮೋಕ್ಷಃ ಸುಖಂ ದುಃಖಮಾವೃತಿರ್ಜ್ಯೋತಿರೇವ ಚ ॥
ವಿಷ್ಣುನಾಽಸ್ಯ ಸಮಸ್ತಸ್ಯ ಸಮಾಸವ್ಯಾಸಯೋಗತಃ ॥

## ೨೨. ತತ್ತ್ವವಿವೇಕಃ

ಆದಿ→ ಸ್ವತಂತ್ರಂ ಪರತಂತ್ರಂ ಚ ಪ್ರಮೇಯಂ ದ್ವಿವಿಧಂ ಮತಮ್ ।
ಸ್ವತಂತ್ರೋ ಭಗವಾನ್ ವಿಷ್ಣುರ್ನಿರ್ದೋಷಾಖಿಲಸದ್ಗುಣಃ ॥

ಅಂತ್ಯ→ ಯ ಏತತ್ಪರತಂತ್ರಂ ತು ಸರ್ವಮೇವ ಹರೇಃ ಸದಾ ।
ವಶಮಿತ್ಯೇವ ಜಾನಾತಿ ಸಂಸಾರಾನ್ಮುಚ್ಯತೇ ಹಿ ಸಃ ॥

## ೨೩. ಪ್ರಮಾಣಲಕ್ಷಣಮ್

ಆದಿ→ ಅಶೇಷಗುರುಮೀಶೇಶಂ ನಾರಾಯಣಮನಾಮಯಮ್ ।
ಸಂಪ್ರಣಮ್ಯ ಪ್ರವಕ್ಷ್ಯಾಮಿ ಪ್ರಮಾಣಾನಾಂ ಸ್ವಲಕ್ಷಣಮ್ ॥

ಅಂತ್ಯ→ ಅಶೇಷಮಾನಮೇಯೈಕಸಾಕ್ಷಿಣೇಽಕ್ಷಯಮೂರ್ತಯೇ ।
ಅಜೇಶಪುರುಷಹೂತೇಡ್ಯ ನಮೋ ನಾರಾಯಣಾಯ ತೇ ॥

## ೨೪. ಕಥಾಲಕ್ಷಣಮ್

ಆದಿ→ ನೃಸಿಂಹಮಖಿಲಾಜ್ಞಾನತಿಮಿರಾಶಿಶಿರದ್ಯುತಿಮ್ ।
ಸಂಪ್ರಣಮ್ಯ ಪ್ರವಕ್ಷ್ಯಾಮಿ ಕಥಾಲಕ್ಷಣಮಂಜಸಾ ॥

ಅಂತ್ಯ→ ಆನಂದತೀರ್ಥಮುನಿನಾ ಬ್ರಹ್ಮತರ್ಕಾನುಸಾರತಃ ।
ಕಥಾಲಕ್ಷಣಮಿತ್ಯುಕ್ತಂ ಪ್ರೀತ್ಯರ್ಥಂ ಶಾರ್ಙ್ಗಧನ್ವನಃ ॥
ಸದೋದಿತಾಮಿತಜ್ಞಾನಪೂರವಾರಿತ ಹೃತ್ತಮಾಃ ।
ನರಸಿಂಹಃ ಪ್ರಿಯತಮಃ ಪ್ರೀಯತಾಂ ಪುರುಷೋತ್ತಮಃ ॥



## ೨೫. ಉಪಾದಿಖಂಡನಮ್

ಆದಿ→ ನಾರಾಯಣೋಽಗಣ್ಯಗುಣನಿತ್ಯೈಕನಿಲಯಾಕೃತಿಃ ।
ಅಶೇಷದೋಷರಹಿತಃ ಪ್ರೀಯತಾಂ ಕಮಲಾಲಯಃ ॥

ಅಂತ್ಯ→ ನಮೋಽಮಂದನಿಜಾನಂದಸಾಂದ್ರಸುಂದರಮೂರ್ತಯೇ ।
ಇಂದಿರಾಪತಯೇ ನಿತ್ಯಾನಂದಭೋಜನದಾಯಿನೇ ॥

## ೨೬. ಮಾಯಾವಾದಖಂಡನಮ್

ಆದಿ→ ನರಸಿಂಹೋಽಖಿಲಾಜ್ಞಾನಮತಧ್ವಾಂತದಿವಾಕರಃ ।
ಜಯತ್ಯಮಿತಸಜ್ಜ್ಞಾನಸುಖಶಕ್ತಿಪಯೋನಿಧಿಃ ॥

ಅಂತ್ಯ→ ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ ।
ಏತೇನ ಸತ್ಯವಾಕ್ಯೇನ ಸರ್ವಾರ್ಥಾನ್ ಸಾಧಯಾಮ್ಯಹಮ್ ॥

## ೨೭. ಪ್ರಪಂಚಮಿಥ್ಯಾತ್ವಾನುಮಾನಖಂಡನಮ್

ಆದಿ→ ವಿಮತಂ ಮಿಥ್ಯಾ ದೃಶ್ಯತ್ವಾದ್ಯದಿತ್ಥಂ ತತ್ತಥಾ ಯಥಾ ಸಂಪ್ರತಿಪನ್ನಮ್ ॥

ಅಂತ್ಯ→ ಯೋ ದೃಶ್ಯತೇ ಸದಾನಂದನಿತ್ಯವ್ಯಕ್ತಚಿದಾತ್ಮನಾ ।
ನಿರ್ದೋಷಾಖಿಲಕಲ್ಯಾಣಗುಣಂ ವಂದೇ ರಮಾಪತಿಮ್ ॥

## ೨೮. ತತ್ತ್ವೋದ್ಯೋತಃ

ಆದಿ→ ಸರ್ವತ್ರಾಖಿಲಸಚ್ಛಕ್ತಿಃ ಸ್ವತಂತ್ರೋಽಶೇಷದರ್ಶನಃ ।
ನಿತ್ಯಾತಾದೃಶಚಿಚ್ಚೇತ್ಯಯಂತೇಷ್ಟೋ ನೋ ರಮಾಪತಿಃ ॥

ಅಂತ್ಯ→ ಸತ್ಯಚಿಚ್ಚೇತ್ಯಪತಯೇ ಮುಕ್ತಾಮುಕ್ತೋತ್ತಮಾಯ ತೇ ।
ನಮೋ ನಾರಾಯಣಾಯಾರ್ಯವೃಂದವಂದಿತಪದ್ದ್ವಯ ॥

## ೨೯. ವಿಷ್ಣುತತ್ತ್ವವಿನಿರ್ಣಯಃ

ಆದಿ→ ಸದಾಗಮೈಕವಿಜ್ಞೇಯಂ ಸಮತೀತಕ್ಷರಾಕ್ಷರಮ್ ।
ನಾರಾಯಣಂ ಸದಾ ವಂದೇ ನಿರ್ದೋಷಾಶೇಷಸದ್ಗುಣಮ್ ॥

ಅಂತ್ಯ→ ಯಸ್ಯ ತ್ರೀಣ್ಯುದಿತಾನಿ....... ಗ್ರಂಥಃ ಕೃತಃ ಕೇಶವೇ ।
ಸ್ವತಂತ್ರಾಯಾಖಿಲೇಶಾಯ ನಿರ್ದೋಷಗುಣರೂಪಿಣೇ ।
ಪ್ರೇಯಸೇ ಮೇ ಸುಪೂರ್ಣಾಯ ನಮೋ ನಾರಾಯಣಾಯ ತೇ ॥

## ೩೦. ಕರ್ಮನಿರ್ಣಯಃ

ಆದಿ→ ಯ ಇಜ್ಯತೇ ವಿಧಿಶಾನಶಕ್ರಪೂರ್ವೈಃ ಸದಾ ಮಖೈಃ ।
ರಮಾಪ್ರಣಯಿನೇ ತಸ್ಮೈ ಸರ್ವಯಜ್ಞಭುಜೇ ನಮಃ ॥

ಅಂತ್ಯ→ ಯ ಇಜ್ಯತೇ ವಿಧಿಶಾನಶಕ್ರಪೂರ್ವೈಃ ಸದಾ ಮಖೈಃ ।
ರಮಾಪ್ರಣಯಿನೇ ತಸ್ಮೈ ಸರ್ವಯಜ್ಞಭುಜೇ ನಮಃ ॥

## ೩೧. ಸದಾಚಾರಸ್ಮೃತಿಃ

ಆದಿ→ ಯಸ್ಮಿನ್ ಸರ್ವಾಣಿ ಕರ್ಮಾಣಿ ಸನ್ನ್ಯಸ್ಯಾಧ್ಯಾತ್ಮಚೇತಸಾ ।
ನಿರಾಶೀರ್ನಿರ್ಮಮೋ ಯಾತಿ ಪರಂ ಜಯತಿ ಸೋಽಚ್ಯುತಃ ॥

ಅಂತ್ಯ→ ಅಶೇಷಕಲ್ಯಾಣಗುಣನಿತ್ಯಾನುಭವಸತ್ತನುಃ ।
ಅಶೇಷದೋಷರಹಿತಃ ಪ್ರೀಯತಾಂ ಪುರುಷೋತ್ತಮಃ ॥

## ೩೨. ಕೃಷ್ಣಾಮೃತಮಹಾರ್ಣವಃ

ಆದಿ→ ಅರ್ಚಿತಃ ಸಂಸ್ಮೃತೋ ಧ್ಯಾತಃ ಕೀರ್ತಿತಃ ಕಥಿತಃ ಶ್ರುತಃ ।
ಯೋ ದದಾತ್ಯಮೃತತ್ವಂ ಹಿ ಸ ಮಾಂ ರಕ್ಷತು ಕೇಶವಃ ॥
ತಾಪತ್ರಯೇಣ ಸಂತಪ್ತಂ ಯದೇತದಖಿಲಂ ಜಗತ್ ।
ವಕ್ಷ್ಯಾಮಿ ಶಾಂತಯೇ ತಸ್ಯ ಕೃಷ್ಣಾಮೃತಮಹಾರ್ಣವಮ್ ॥
ಸಂಸಾರವಿಷಪಾನೇನ ಯೇ ಮೃತಾಃ ಪ್ರಾಣಿನೋ ಭುವಿ ।
ಅಮೃತಾಯ ಸ್ಮೃತಸ್ತೇಷಾಂ ಕೃಷ್ಣಾಮೃತಮಹಾರ್ಣವಃ ॥

ಅಂತ್ಯ→ ಶ್ರೀಮದಾನಂದತೀರ್ಥಾರ್ಯಸಹಸ್ರಕಿರಣೋತ್ಥಿತಾ ।
ಗೋತತಿಃ ಸತತಂ ಸೇವ್ಯಾ ಗೀರ್ವಾಣೈಃ ಸಿದ್ಧಿದಾ ಭವೇತ್ ॥
ಯಸ್ಯ ತ್ರೀಣ್ಯುದಿತಾನಿ......ಗ್ರಂಥಃ ಕೃತಃ ಕೇಶವೇ ।
ಯಃ ಸರ್ವಗುಣಸಂಪೂರ್ಣಃ ಸರ್ವದೋಷವಿವರ್ಜಿತಃ ।
ಪ್ರೀಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಃ ಸುಹೃತ್ ॥

## ೩೩. ಜಯಂತೀನಿರ್ಣಯಃ

ಆದಿ→ ರೋಹಿಣ್ಯಾಮರ್ಧರಾತ್ರೇ ತು ಯದಾ ಕಾಲಾಷ್ಟಮೀ ಭವೇತ್ ।
ಜಯಂತೀ ನಾಮ ಸಾ ಪ್ರೋಕ್ತಾ ಸರ್ವಪಾಪಪ್ರಣಾಶನೀ ॥

ಅಂತ್ಯ→ ಧರ್ಮಾಯೇತ್ಯಾದಿಮಂತ್ರೇಣ ತತಃ ಪಾರಣಮಾಚರೇತ್ ।
ಸರ್ವಾಯೇತಿ ತತಃ ಸ್ವಸ್ಥೋ ಮುಚ್ಯತೇ ಸರ್ವಕಿಲ್ಬಿಷೈಃ ॥



## ೩೪. ತಂತ್ರಸಾರಸಂಗ್ರಹಃ

ಆದಿ→ ಜಯತ್ಯಬ್ಜಭವೇಶೇಂದ್ರವಂದಿತಃ ಕಮಲಾಪತಿಃ ।
ಅನಂತವಿಭವಾನಂದಶಕ್ತಿಜ್ಞಾನಾದಿಸದ್ಗುಣಃ ॥

ಅಂತ್ಯ→ ಅಶೇಷದೋಷೋಜ್ಝಿತಪೂರ್ಣಸದ್ಗುಣಂ ಸದಾ ವಿಶೇಷಾವಗತೋರುರೂಪಮ್ ।
ನಮಾಮಿ ನಾರಾಯಣಮಪ್ರತೀಪಂ ಸದಾ ಪ್ರಿಯೇಭ್ಯಃ ಪ್ರಿಯಮಾದರೇಣ ॥

## ೩೫. ಯತಿಪ್ರಣವಕಲ್ಪಃ

ಆದಿ→ ಸಮಿಚ್ಚರ್ವಾದಿಕಾನ್ ಹುತ್ವಾ ಸಮ್ಯಕ್ ಪುರುಷಸೂಕ್ತತಃ ।
ಸರ್ವೇಷಾಮಭಯಂ ದತ್ವಾ ವಿರಕ್ತಃ ಪ್ರವ್ರಜೇದ್ಧರಿಮ್ ॥

ಅಂತ್ಯ→ ತದರ್ಥಾನ್ ಬ್ರಹ್ಮಸೂತ್ರೈಶ್ಚ ಸಮ್ಯಙ್ನಿರ್ಣೀಯ ತತ್ತ್ವತಃ ।
ವಿಷ್ಣೋಃ ಸರ್ವೋತ್ತಮತ್ವಂ ಚ(ತು) ಸರ್ವದಾ ಪ್ರತಿಪಾದಯ ॥

## ೩೬. ನರಸಿಂಹನಖಸ್ತುತಿಃ

ಆದಿ→ ಪಾಂತ್ವಸ್ಮಾನ್ ಪುರುಹೂತವೈರಿಬಲವನ್ಮಾತಂಗಮಾದ್ಯದ್ಘಟಾ-
ಕುಂಭೋಚ್ಚಾದ್ರಿವಿಪಾಟನಾಧಿಕಪಟುಪ್ರತ್ಯೇಕವಜ್ರಾಯಿತಾಃ ।
ಶ್ರೀಮತ್ಕಂಠೀರವಾಸ್ಯಪ್ರತತಸುನಖರಾ ದಾರಿತಾರಾತಿದೂರ-
ಪ್ರಧ್ವಸ್ತಧ್ವಾಂತಶಾಂತಪ್ರವಿತತಮನಸಾ ಭಾವಿತಾ ನಾಕಿವೃಂದೈಃ ॥

ಅಂತ್ಯ→ ಲಕ್ಷ್ಮೀಕಾಂತ ಸಮಂತತೋ ವಿ(ಪಿ)ಕಲಯನ್ನೈವೇಶಿತುಸ್ತೇ ಸಮಂ
ಪಶ್ಯಾಮ್ಯುತ್ತಮವಸ್ತು ದೂರತರತೋಽಪಾಸ್ತಂ ರಸೋ ಯೋಽಷ್ಟಮಃ ।
ಯದ್ರೋಷೋತ್ಕರದಕ್ಷನೇತ್ರಕುಟಿಲಪ್ರಾಂತೋತ್ಥಿತಾಗ್ನಿಸ್ಫುರ-
ತ್ಖದ್ಯೋತೋಪಮವಿಸ್ಫುಲಿಂಗಭಸಿತಾ ಬ್ರಹ್ಮೇಶಶಕ್ರೋತ್ಕರಾಃ ॥

## ೩೭. ದ್ವಾದಶಸ್ತೋತ್ರಮ್

ಆದಿ→ ವಂದೇ ವಂದ್ಯಂ ಸದಾನಂದಂ ವಾಸುದೇವಂ ನಿರಂಜನಮ್ ।
ಇಂದಿರಾಪತಿಮಾದ್ಯಾದಿವರದೇಶವರಪ್ರದಮ್ ॥

ಅಂತ್ಯ→ ಆನಂದ ಚಂದ್ರಿಕಾಸ್ಯಂದಕವಂದೇ ।
ಆನಂದತೀರ್ಥಪರಾನಂದವರದ ॥

## ೩೮. ಕಂದುಕಸ್ತುತಿಃ

ಆದಿ→ ಅಂಬರಗಂಗಾಚುಂಬಿತಪಾದಃ ಪದತಲವಿದಲಿತಗುರುತರಶಕಟಃ ।
ಕಾಲಿಯನಾಗಕ್ಷ್ವೇಲನಿಹಂತಾ ಸರಸಿಜನವದಲವಿಕಸಿತನಯನಃ ॥

ಅಂತ್ಯ→ ಕಾಲಘನಾಲೀಕರ್ಬುರಕಾಯಃ ಶರಶತಶಕಲಿತರಿಪುಶತನಿವಹಃ ।
ಸಂತತಮಸ್ಮಾನ್ ಪಾತು ಮುರಾರಿಃ ಸತತಗಸಮಜವಖಗಪತಿನಿರತಃ ॥

**********

**ವಿಶೇಷಾಂಶ :** ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ಶ್ರೀವೇದವ್ಯಾಸರಿಂದ ಆಜ್ಞಪ್ತರಾಗಿ ಬ್ರಹ್ಮಸೂತ್ರಭಾಷ್ಯ ಬರೆದರು.

ಆಮೇಲೆ ಇದನ್ನೇ ಅನೇಕ ರೀತಿಯಿಂದ ವಿಸ್ತಾರವಾಗಿ ಗ್ರಂಥಗಳನ್ನು ರಚಿಸಿದರು. ಹೀಗೆ ಶ್ರೀಮದಾಚಾರ್ಯರು ೩೭ ಗ್ರಂಥಗಳನ್ನು ಬರೆದರೆಂದು ಎಲ್ಲಾ ಜ್ಞಾನಿಗಳು ಒಮ್ಮತವಾಗಿ ತಿಳಿಸಿರುತ್ತಾರೆ.

ಆದರೆ ಶ್ರೀಮದಾಚಾರ್ಯರ ಪ್ರತಿಯೊಂದು ವಾಕ್ಯವೂ ಒಂದು ಗ್ರಂಥರೂಪವಾಗಿರುತ್ತದೆ. ಆಚಾರ್ಯರು ಏನು ಹೇಳಿದರೂ ಪ್ರಮಾಣಪೂರ್ವಕವಾಗಿಯೇ ಹೇಳುತ್ತಾರೆ. **"ವಯಂ ಪ್ರಮಾಣ ಶರಣ್ಯಮಹ"** ಎಂದು ಹೇಳಿಕೊಂಡಿರುತ್ತಾರೆ. ಸರ್ವಜ್ಞರಾದ ಆಚಾರ್ಯರು ಹೀಗೆ ಹೇಳಬೇಕಾದರೆ ಅವರು ಜೀವೋತ್ತಮರಾದ ವಾಯವ್ಯಂಶವೆಂದು ಖಚಿತವಾಗುವುದು.

೩೭ ಮುಖ್ಯ ಗ್ರಂಥಗಳಲ್ಲಿ ದ್ವಾದಶ ಸ್ತೋತ್ರವನ್ನು ಒಂದೇ ಗ್ರಂಥವೆಂದು ಶ್ರೀವ್ಯಾಸರಾಜ ಯತಿಗಳು ಗ್ರಂಥಮಾಲಿಕಾಸ್ತೋತ್ರಮ್ ಎಂಬ ಕೃತಿಯಲ್ಲಿ ೧೧ನೇ ಶ್ಲೋಕ **ದ್ವಾದಶಸ್ತೋತ್ರಮಕರೋತ್** ಎಂದು ತಿಳಿಸುತ್ತಾರೆ. ಈ ದ್ವಾದಶ ಸ್ತೋತ್ರ ಹೆಸರೇ ತಿಳಿಸುತ್ತದೆ ಶ್ರೀಆಚಾರ್ಯರ ೧೨ ಸ್ತೋತ್ರಗಳನ್ನು ಬರೆದರೆಂದು. ಆಗ ೩೭ ಅಷ್ಟೇ ಅಲ್ಲ. ಈ ದ್ವಾದಶ ಸ್ತೋತ್ರವನ್ನು ಸೇರಿಸಿದರೆ ೪೮ ಗ್ರಂಥಗಳೆನಿಸುತ್ತದೆ. ಆಗ ದ್ವಾದಶ ಸ್ತೋತ್ರಗಳ ಪ್ರತಿಯೊಂದಕ್ಕೂ ಆದ್ಯಂತ ಶ್ಲೋಕಗಳನ್ನು ಪಠಿಸಬೇಕೆಂದು ತಿಳಿಯಬೇಕು.

ಶ್ರೀದ್ವಾದಶ ಸ್ತೋತ್ರ ಆದಿ, ಅಂತ್ಯ ಶ್ಲೋಕಗಳು ಶ್ರೀಮದಾನಂದತೀರ್ಥರು ರಚಿಸಿದ ಅನೇಕ ಗ್ರಂಥಗಳ ಪೈಕಿ ಈ ೧೨ ಶ್ರೀಮನ್ನಾರಾಯಣನ ಗುಣಗಾನ ಮಾಡುವ ೧೨ ಸ್ತೋತ್ರಗಳು. ಈ ೧೨ ಸ್ತೋತ್ರಗಳು ಒಂದೊಂದೂ ಒಂದು ಗ್ರಂಥರೂಪವಾಗಿರುವುದು.

ಹೀಗೆ ಈ ಸ್ತೋತ್ರಗಳು ಅತಿ ಗಂಭೀರ, ಗಹನ, ಪ್ರೌಢ ಕೃತಿಯಾಗಿರುವುದು ಶ್ರೀಮದಾಚಾರ್ಯರ ಮತ್ತೊಂದು ಪ್ರತಿಭೆ. ಇದು ಬರೀ ಸ್ತೋತ್ರರೂಪ ಕಾವ್ಯವಲ್ಲದೆ ಶ್ರೀಹರಿಯ ಅನಂತ ಮಹಿಮೆ, ಮಂಗಳಪ್ರದ ಲೀಲೆಗಳು ಸುಂದರವಾಗಿ ವರ್ಣಿತವಾಗಿ ಭಕ್ತಿಯನ್ನುಂಟುಮಾಡುವ ಮಹತ್ತರ ಕಾವ್ಯ. ಮುಖ್ಯವಾಗಿ ಶ್ರೀಮದಾಚಾರ್ಯರು (೧) ಉತ್ತಮ ಕವಿಗಳೆಂದೂ (೨) ಸಂಗೀತ ಚತುರರೆಂದೂ (೩) ಈ ಕಾವ್ಯರಾಶಿಗಳನ್ನು ಮಧುರವಾಗಿ ಸಂಗೀತ–ಸಾಹಿತ್ಯಗಳ ಸಮನ್ವಯವಾಗಿರುವುದರಿಂದ ಶ್ರೀಮದಾಚಾರ್ಯರೇ **ಪ್ರಥಮ ಹರಿದಾಸ**ರೆಂದು ನಿಶ್ಚಯವಾಗಿ ಹೇಳಬಹುದು. ಸಂಸ್ಕೃತ ಸಾಹಿತ್ಯದಲ್ಲಿ ಹರಿ ಲೀಲೆಗಳನ್ನು ಇಷ್ಟು ಮನೋಜ್ಞವಾಗಿ ರಚಿಸಿ ಹಾಡಲೂ **ಯೋಗ್ಯ ಹರಿದಾಸ ಸಾಹಿತ್ಯ ಇವರಿಂದಲೆ ಜನಿಸಿತು** ಎಂದು ಹೇಳಬಹುದು.



## ದ್ವಾದಶಸ್ತೋತ್ರ ಆದ್ಯಂತ ಶ್ಲೋಕಗಳು

### ಪ್ರಥಮೋಧ್ಯಾಯಃ

ಆದಿ ವಂದೇ ವಂದ್ಯಂ ಸದಾನಂದಂ ವಾಸುದೇವಂ ನಿರಂಜನಮ್ ।
ಇಂದಿರಾಪತಿಮಾದ್ಯಾದಿವರದೇಶವರಪ್ರದಮ್ ॥

ಅಂತ್ಯ ಸಂತತಂ ಚಿಂತಯೇಽನಂತಮಂತಕಾಲೇ ವಿಶೇಷತಃ
ನೈವೋದಾಪುರ್ಗೃಣಂತೋಽಂತಂ ಯದ್ಗುಣಾನಾಮಜಾದಯಃ ॥

### ದ್ವಿತೀಯೋಧ್ಯಾಯಃ

ಆದಿ ಸುಜನೋದಧಿಸಂವೃದ್ಧಿಪೂರ್ಣಚಂದ್ರ ಗುಣಾರ್ಣವಃ ।
ಅಮಂದಾನಂದಸಾಂದ್ರೋ ನಃ ಪ್ರೀಯತಾಮಿಂದಿರಾಪತಿಃ ॥

ಅಂತ್ಯ ಇಂದಿರಾಮಂದಸಾಂದ್ರಾಗ್ರ್ಯಕಟಾಕ್ಷಪ್ರೇಕ್ಷಿತಾತ್ಮನೇ ।
ಅಸ್ಮದಿಷ್ಟೈಕಕಾರ್ಯಾಯ ಪೂರ್ಣಾಯ ಹರಯೇ ನಮಃ ॥

### ತೃತೀಯೋಧ್ಯಾಯಃ

ಆದಿ ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದವಿನಮ್ರಧಿಯಾ ಸತತಮ್ ।
ಹರಿರೇವ ಪರೋ ಹರಿರೇವ ಗುರುರ್ಹರಿರೇವ ಜಗತ್ಪಿತೃಮಾತೃಗತಿಃ ॥

ಅಂತ್ಯ ಆನಂದತೀರ್ಥಸನ್ನಾಮ್ನಾ ಪೂರ್ಣಪ್ರಜ್ಞಾಭಿಧಾಯುಜಾ ।
ಕೃತಂ ಹರ್ಯಷ್ಟಕಂ ಭಕ್ತ್ಯಾ ಪಠತಃ ಪ್ರೀಯತೇ ಹರಿಃ ॥

### ಚತುರ್ಥೋಧ್ಯಾಯಃ

ಆದಿ ನಿಜಪೂರ್ಣಸುಖಾಮಿತಬೋಧತನುಃ ಪರಶಕ್ತಿರನಂತಗುಣಃ ಪರಮಃ ।
ಅಜರಾಮರಣಃ ಸಕಲಾರ್ತಿಹರಃ ಕಮಲಾಪತಿರೀಡ್ಯತಮೋಽವತು ನಃ ॥

ಅಂತ್ಯ ಇತಿ ದೇವವರಸ್ಯ ಹರೇಃ ಸ್ತವನಂ ಕೃತವಾನ್ ಮುನಿರುತ್ತಮಮಾದರತಃ ।
ಸುಖತೀರ್ಥಪದಾಭಿಹಿತಃ ಪಠತಸ್ತದಿದಂ ಭವತಿ ಧ್ರುವಮುಚ್ಚಸುಖಮ್॥

### ಪಂಚಮೋಧ್ಯಾಯಃ

ಆದಿ ವಾಸುದೇವಾಪರಿಮೇಯ ಸುಧಾಮನ್ ಶುದ್ಧ ಸದೋದಿತ ಸುಂದರಿಕಾಂತ ।
ದರಾಧರಧಾರಿಣವೇಧುರಧರ್ತಃ ಸೌಧೃತಿದೀಧಿತಿವೇಧೃವಿಧಾತಃ ॥

ಅಂತ್ಯ ಆನಂದತೀರ್ಥಮುನೀಂದ್ರಕೃತಾ ಹರಿಗೀತಿರಿಯಂ ಪರಮಾದರತಃ ।
ಪರಲೋಕವಿಲೋಕನಸೂರ್ಯನಿಭಾ ಹರಿಭಕ್ತಿವಿವರ್ಧನ ಶೌಂಡತಮಾ॥

## ಷಷ್ಠೋಽಧ್ಯಾಯಃ

ಆದಿ ಮತ್ಸ್ಯಕರೂಪ ಲಯೋದವಿಹಾರಿನ್ ವೇದವಿನೇತೃ ಚತುರ್ಮುಖವಂದ್ಯ ।
ಕೂರ್ಮಸ್ವರೂಪಕ ಮಂದರಧಾರಿನ್ ಲೋಕವಿಧಾರಕ ದೇವ ವರೇಣ್ಯ॥

ಅಂತ್ಯ ದುಷ್ಟಕುಲಾಂತಕ ಕಲ್ಕಿಸ್ವರೂಪ ಧರ್ಮವಿವರ್ಧನ ಮೂಲಯುಗಾದೇ ।
ನಾರಾಯಣಾಮಲಕಾರಣಮೂರ್ತೇ ಪೂರ್ಣಗುಣಾರ್ಣವ ನಿತ್ಯವಿಬೋಧ ॥
ಸುಖತೀರ್ಥಮುನೀಂದ್ರಕೃತಾ ಹರಿಗಾಥಾ ।
ಪಾಪಹರಾ ಶುಭಾ ನಿತ್ಯಸುಖಾರ್ಥ ॥

## ಸಪ್ತಮೋಧ್ಯಾಯಃ

ಆದಿ ವಿಶ್ವಸ್ಥಿತಿಪ್ರಲಯಸರ್ಗಮಹಾವಿಭೂತಿ–
ವೃತ್ತಿಪ್ರಕಾಶನಿಯಮಾವೃತಿಬಂಧಮೋಕ್ಷಾಃ ।
ಯಸ್ಯಾ ಅಪಾಂಗಲವಮಾತ್ರತ ಊರ್ಜಿತಾ ಸಾ
ಶ್ರೀರ್ಯತ್ಕಟಾಕ್ಷಬಲವತ್ಯಜಿತಂ ನಮಾಮಿ ॥

ಅಂತ್ಯ ನಾಗಾರಿರುಗ್ರಬಲಪೌರುಷ ಆಪ ವಿಷ್ಣೋ–
ರ್ವಾಹತ್ವಮುತ್ತಮಜವೋ ಯದಪಾಂಗಲೇಶಮ್ ।
ಆಶ್ರಿತ್ಯ ಶಕ್ರಮುಖದೇವಗಣೈರಚಿಂತ್ಯಂ
ಶ್ರೀರ್ಯತ್ಕಟಾಕ್ಷಬಲವತ್ಯಜಿತಂ ನಮಾಮಿ ॥

ಆನಂದತೀರ್ಥಮುನಿಸನ್ಮುಖಪಂಕಜೋತ್ಥಂ
ಸಾಕ್ಷಾದ್ರಮಾಹರಿಮನಃಪ್ರಿಯಮ್‌ಉತ್ತಮಾರ್ಥಮ್ ।
ಭಕ್ತ್ಯಾ ಪಠತ್ಯಜಿತಮಾತ್ಮನಿ ಸನ್ನಿಧಾಯ
ಯಃ ಸ್ತೋತ್ರಮೇತದಭಿಯಾತಿ ತಯೋರಭೀಷ್ಟಮ್ ॥

## ಅಷ್ಟಮೋಧ್ಯಾಯಃ

ಆದಿ ವಂದಿತಾಶೇಷವಂದ್ಯೋರುವೃಂದಾರಕಂ
ಚಂದನಾಚರ್ಚಿತೋದಾರಪೀನಾಂಸಕಮ್ ।
ಇಂದಿರಾಚಂಚಲಾಪಾಂಗನೀರಾಜಿತಂ
ಮಂದರೋದ್ಧಾರಿವೃತ್ತೋದ್ಭುಜಾಭೋಗಿನಮ್ ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್

ಅಂತ್ಯ ನಂದಿತೀರ್ಥೋರುಸನ್ನಾಮಿನೋ ನಂದಿನಃ
ಸಂದಧಾನಾಃ ಸದಾನಂದದೇವೇ ಮತಿಮ್ ।
ಮಂದಹಾಸಾರುಣಾಪಾಂಗದತ್ತೋನ್ನತಿಂ
ನಂ(ವಂ)ದಿತಾಶೇಷದೇವಾದಿವೃಂದಂ ಸದಾ ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್



## ನವಮೋಧ್ಯಾಯಃ

ಆದಿ ಅತಿಮತತಮೋಗಿರಿಸಮಿತಿವಿಭೇದನ ಪಿತಾಮಹಭೂತಿದ ಗುಣಗಣನಿಲಯ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ॥

ಅಂತ್ಯ ಅಖಿಲಜನಿವಿಲಯ ಪರಸುಖಕಾರಣ ಪರಪುರುಷೋತ್ತಮ ಭವ ಮಮ ಶರಣಮ್।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ॥
ಇತಿ ತವನುತಿವರಸತತರತೇರ್ಭವ ಸುಶರಣಮುರುಸುಖತೀರ್ಥಮುನೇರ್ಭಗವನ್॥

## ದಶಮೋಧ್ಯಾಯಃ

ಆದಿ ಅವನ ಶ್ರೀಪತಿರಪ್ರತಿರಧಿಕೇಶಾದಿಭವಾದೇ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥

ಅಂತ್ಯ ಪರಮಜ್ಞಾನಮಹಾನಿಧಿವದನ ಶ್ರೀರಮಣೇಂದೋ
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥

ಪರಮಾನಂದಸುತೀರ್ಥಸುಮುನಿರಾಜೋ ಹರಿಗಾಥಾಮ್ ।
ಕೃತವಾನ್ ನಿತ್ಯಸುಪೂರ್ಣಕಪರಮಾನಂದಪದ್ಯೈ(ಷೀ)ಷಿನ್ ॥

## ಏಕಾದಶೋಧ್ಯಾಯಃ

ಆದಿ ಉದೀರ್ಣಮಜರಂ ದಿವ್ಯಮಮೃತಸ್ಯಂದ್ಯಧೀಶಿತುಃ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿವಂದಿತಮ್ ॥

ಅಂತ್ಯ ಪೂರ್ಣಸರ್ವಗುಣೈಕಾರ್ಣಮನಾದ್ಯಂತಂ ಸುರೇಶಿತುಃ
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿವಂದಿತಮ್ ॥

ಆನಂದತೀರ್ಥಮುನಿನಾ ಹರೇರಾನಂದರೂಪಿಣಃ ।
ಕೃತಂ ಸ್ತೋತ್ರಮಿದಂ ಪುಣ್ಯಂ ಪಠನ್ನಾನಂದತಾಮಿಯಾತ್ ॥

## ದ್ವಾದಶೋ ಧ್ಯಾಯಃ

ಆದಿ ಆನಂದ ಮುಕುಂದ ಅರವಿಂದನಯನ ।
ಆನಂದತೀರ್ಥಪರಾನಂದವರದ ॥

ಅಂತ್ಯ ಆನಂದಚಂದ್ರಿಕಾಸ್ಯಂದಕ ವಂದೇ ।
ಆನಂದತೀರ್ಥಪರಾನಂದವರದ ॥

ಪ್ರತಿ ಶ್ಲೋಕಾಂತ್ಯದಲ್ಲಿ ಪ್ರಥಮೋಧ್ಯಾಯವೆಂದು ಎಲ್ಲಾ ೧೨ ಸ್ತೋತ್ರ ಕೊನೆಗೆ ಇರುವುದು. ಅಧ್ಯಾಯ = ಒಂದು ಗ್ರಂಥದಲ್ಲಿ (ಗಳಲ್ಲಿ) (ಅಧಿ + ಇಙ್ಣಂ) ಆಯಾ ಪ್ರಕರಣಗಳನ್ನು ಅಂತ್ಯಗೊಳಿಸುವಾಗ ಭಾಗ ಅಧ್ಯಾಯವೆಂದಾಗ ೧೨ ಸ್ತೋತ್ರಗಳಲ್ಲಿ ಅನೇಕ ಪ್ರಕರಣಗಳು ವರ್ಣಿತವಾಗಿರುವುದು. ಆದರೂ ಶ್ರೀಮದಾಚಾರ್ಯರು ಇವೆಲ್ಲವನ್ನು ಸ್ತುತಿ, ನುತಿ, ಸ್ತೋತ್ರವೆಂತಲೇ ತಿಳಿಸುತ್ತಾರೆ. ಅಧ್ಯಾಯಗಳಲ್ಲಿ ಸ್ತುತಿ ಸ್ತೋತ್ರಗಳು ಇರುವುದರಿಂದ ಈ ೧೨ನ್ನೂ ಸ್ತೋತ್ರಗಳೆಂದು ಕರೆಯಲಾಗಿದೆ.

ಎರಡು ಪ್ರಸಂಗಗಳಲ್ಲಿ ಈ ಸ್ತೋತ್ರ ರಚನೆಯ ಹಿನ್ನೆಲೆ ತಿಳಿಸಲಾಗಿದೆ.

(೧) ವಿಶ್ವಪತಿತೀರ್ಥರ ಪ್ರಸಿದ್ಧ ವ್ಯಾಖ್ಯಾನದಲ್ಲಿ ಹೀಗೆ ತಿಳಿಸಲಾಗಿದೆ. ಉಡುಪಿಯಿಂದ ಮಲ್ಪೆ ಕಡೆ ಸಮುದ್ರ ಸ್ನಾನಕ್ಕಾಗಿ ಶಿಷ್ಯ ಸಮೇತ ಹೋದರು. ತೆರಳುವಾಗ ಈ ಸ್ತುತಿಯನ್ನು ಹಾಡುತ್ತಲೇ ಸಮುದ್ರತೀರ ಸೇರಿದಾಗ ದೂರದಲ್ಲಿ ಒಂದು ಹಡಗು ಸಮುದ್ರದಲೆಗಳಿಗೆ ಸಿಕ್ಕಿ ಡೋಲಾಯಮಾನವಾಗಿ ಮುಳುಗುವ ಪ್ರಸಂಗ ನಡೆಯಿತು. ಆ ಹಡಗು ಉತ್ತರ ದಿಕ್ಕಿನ ದ್ವಾರಕಾಯಿಂದ ಅನೇಕ ವಸ್ತುಗಳನ್ನು ಹೊತ್ತು ಒಬ್ಬ ಮುಸಲ್ಮಾನ ಅಧಿಪತಿಯೊಂದಿಗೆ ಸಾಗುತ್ತಾ ವ್ಯಾಪಾರಕ್ಕೆ ಹೊರಟಿರುವಾಗ ಈ ಘಟನೆ ನಡೆಯಿತು. ಆ ಹಡಗಿನ ಯಜಮಾನ ಮುಳುಗುವ ಹಡಗಿನಿಂದ ಕಾಪಾಡಿ ಎಂದು ಘಟ್ಟಿಯಾಗಿ ಕೂಗಿದ. ಶ್ರೀಆಚಾರ್ಯರು ಇಂತಹ ಆಪತ್ತು ಪರಿಸ್ಥಿತಿಯನ್ನು ಕಂಡು ತಾವು ಹೊದ್ದಿರುವ ಶಾಟಿಯಿಂದ ಗಾಳಿಯಲ್ಲಿ ಹಾರಿಸಿದರು. ವಾಯುದೇವರ ಅವತಾರರು ಕೇಳಬೇಕೆ ? ಬಿರುಗಾಳಿ ಶಾಂತವಾಗಿ ಹಡಗು ತೀರಕ್ಕೆ ಬಂದಿತು. ಹಡಗಿನ ಮಾಲೀಕನಿಗೆ ಶ್ರೀಆಚಾರ್ಯರ ಮಹಿಮೆಯಿಂದ ತಾನು ಇತರ ಪರಿವಾರದೊಂದಿಗೆ ಸುರಕ್ಷಿತವಾಗಿ ಬಂದುದಕ್ಕೆ ಸಂತೋಷವಾಯಿತು. ನಮ್ಮನ್ನು ಕಾಪಾಡಿದಿರಿ. ಈ ಹಡಗಿನಲ್ಲಿರುವ ಸಂಪತ್ತು ಬಹು ಬೆಲೆಬಾಳುವುದಾಗಿರುತ್ತೆ. ತಾವು ಏನು ಬೇಕಾದರೂ ಕೇಳಿ. ಸಂತೋಷದಿಂದ ಕೊಡುತ್ತೇನೆ ಎಂದ. ಶ್ರೀಮದಾಚಾರ್ಯರು ನಾವು ಸನ್ಯಾಸಿಗಳು ಸಂಪತ್ತಿನ ಆಸೆಯಿಲ್ಲ. ಆದರೆ ನಿನ್ನ ಹಡಗಿನಲ್ಲಿರುವ ಎರಡು ಮಣ್ಣಿನ ಗಡ್ಡೆಗಳನ್ನು ಮಾತ್ರ ಕೊಡು ಎಂದರು.

ಎಲ್ಲಾ ಬಿಟ್ಟು ಮಣ್ಣಿನ ಗಡ್ಡೆಯೇ ಶ್ರೀಮದಾಚಾರ್ಯರು ಸರ್ವಜ್ಞರಾದ್ದರಿಂದ ಆ ಮಣ್ಣಿನ ಗಡ್ಡೆಯಲ್ಲಿ ತಮ್ಮ ಉಪಾಸ್ಯ ಮೂರ್ತಿ ಶ್ರೀಕೃಷ್ಣ (ಬಾಲಕೃಷ್ಣ) ಮೂರ್ತಿ ಮತ್ತು ಬಲರಾಮ ದೇವರ ಪ್ರತಿಮೆಗಳಿರುವುದೆಂದು ತಿಳಿದು ಅದನ್ನೇ ಕೇಳಿದರು. ಆ ತುರುಷ್ಕನು ಅಂತೆಯೇ ಕೊಟ್ಟನೆಂದು ಶ್ರೀಆಚಾರ್ಯರು ಅವೆರಡರಲ್ಲಿ ಬಲರಾಮ ದೇವರ ಪ್ರತಿಮೆಯನ್ನು ಸಮುದ್ರತೀರದಲ್ಲೇ ಸ್ಥಾಪಿಸಿದರು. ಅದೇ ಈಗ ವಡಭಾಂಡೇಶ್ವರವೆಂಬ ಆಲಯವಿದೆ.



ಎರಡನೇ ಗಡ್ಡೆಯಲ್ಲಿ ಕಡಗೋಲು ಹಿಡಿದ ಶ್ರೀಕೃಷ್ಣನ ಬಾಲಪ್ರತಿಮೆಯನ್ನು ತಂದು ಉಡುಪಿಯ ಅನಂತೇಶ್ವರ ದೇವಾಲಯದ ದಕ್ಷಿಣದ ಸರೋವರಕ್ಕೆ ಪೂರ್ವದಿಕ್ಕಿಗೆ ಸ್ಥಾಪಿಸಿದರು. ಇದೇ ಲೋಕಪಸಿದ್ಧ ಉಡುಪಿಯ ಕೃಷ್ಣಾಲಯ. ಆಮೇಲೆ ದ್ವಾದಶ ಸ್ತೋತ್ರವನ್ನು ಪೂರ್ತಿಗೊಳಿಸಿದರೆಂಬ ಅಭಿಮತವಿದೆ. ಅಂದರೆ ಶ್ರೀಮದಾಚಾರ್ಯರು ವಂದೇ ವಂದ್ಯಂ.... ಎನ್ನುವ ಪ್ರಥಮ ಶ್ಲೋಕದಿಂದ ಆರಂಭಿಸಿ ೫ನೇ ಅಧ್ಯಾಯ ವಾಸುದೇವಾಪರಿಮೇಯ...ವರೆಗೂ ಹೇಳಿದ್ದರು. ಶ್ರೀಕೃಷ್ಣ ಪ್ರತಿಸ್ಥಾಪನೆ ನಂತರ ಉಳಿದ ಏಳು ಶ್ಲೋಕಗಳನ್ನು ರಚಿಸಿದರೆಂದು ಉಲ್ಲೇಖವಿದೆ.

(೨) **ಎರಡನೇ ಪ್ರಸಂಗ :** ಶ್ರೀಮಜ್ಜಯತೀರ್ಥರು ಹಿಂದಿನ ಜನ್ಮದಲ್ಲಿ ಎತ್ತಾಗಿ ಅವತರಿಸಿ ಶ್ರೀಮದಾಚಾರ್ಯರು ಸಂಚಾರ ಮಾಡುವಾಗ ಆಚಾರ್ಯರ ಗ್ರಂಥಗಳನ್ನು ಹೊರುತಿದ್ದರಲ್ಲದೇ, ಆಚಾರ್ಯರು ಪಾಠ ಹೇಳುವಾಗ ಹತ್ತಿರದಲ್ಲೇ ಕುಳಿತು ಕೇಳುತ್ತಿದ್ದರು.

ಕೆಲ ಶಿಷ್ಯರು ಆಚಾರ್ಯರೇ ತಮ್ಮ ಅಪೂರ್ವ ಕೃತಿಗಳಿಗೆ ಮುಂದೆ ವ್ಯಾಖ್ಯಾನ ಯಾರು ಮಾಡುತ್ತಾರೆಂದು ಕೇಳಿದಾಗ ಆಚಾರ್ಯರು ಎತ್ತನ್ನು ತೋರಿಸಿ ಇದೇ ವ್ಯಾಖ್ಯಾನ ಮಾಡುವುದು ಎಂದಾಗ ಕುಪಿತರಾದ ಶಿಷ್ಯರು ಎತ್ತು, ಹಾವು ಕಚ್ಚಿ ಸಾಯಲಿ ಎಂದು ಶಪಿಸಿದರು. ಆಚಾರ್ಯರು ಶಿಷ್ಯರನ್ನು ದಂಡಿಸಿ ಕೂಡಲೇ ಈ ದ್ವಾದಶ ಸ್ತೋತ್ರಗಳನ್ನು ಪಠಿಸಿ ಅಭಿಮಂತ್ರಿಸಿದ ಜಲವನ್ನು ಎತ್ತಿನ ಮೇಲೆ ಪ್ರೋಕ್ಷಣೆ ಮಾಡಿದ ಕಾರಣದಿಂದ ಆ ವೃಷಭವು ಬದುಕಿತು ಎಂಬುದರಿಂದ ಈ ಸ್ತೋತ್ರಕ್ಕೆ ವಿಷಹರಣ ಸಾಮರ್ಥ್ಯವಿರುವುದಾಗಿ ಎಲ್ಲಾ ವೈಷ್ಣವ ಭಕ್ತರಿಗೆ ಹೇಳಿದಂತಾಯಿತು.

ಆದ್ದರಿಂದ ಇಂದಿಗೂ ದೇವರ ನೈವೇದ್ಯ ಕಾಲದಲ್ಲಿ ಈ ದ್ವಾದಶ ಸ್ತೋತ್ರ ಪಠಿಸುವ ಸಂಪ್ರದಾಯ ಎಲ್ಲಾ ಮನೆ ಮಠಗಳಲ್ಲಿ ಕಾಣಬಹುದು.

ಈ ಎತ್ತೇ ಮುಂದೆ ಶ್ರೀಮಜ್ಜಯತೀರ್ಥರಾಗಿ ಆಚಾರ್ಯರ ಗ್ರಂಥಗಳಿಗೆ ಅಪೂರ್ವ ಟೀಕಾ ಬರೆದಿರುವುದು ಸರ್ವ ವಿದಿತವೇ.

ಕೊನೆಯದಾಗಿ ಈ ಸ್ತೋತ್ರ ಆರಂಭ ಒಂದೇ ಎನ್ನುವಲ್ಲಿ 'ವ' ಕೊನೆಯ ವಿಮಿಕ್ತಿದಂ ಎನ್ನುವಲ್ಲಿನ 'ದ' ಅಕ್ಷರ ಅಮೃತಬೀಜಾಕ್ಷರವೆಂದು ಜ್ಞಾನಿಗಳು ತಿಳಿಸುತ್ತಾರೆ.

# ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಗ್ರಂಥ ಟೀಕಾ ಟಿಪ್ಪಣಿಗಳು

| ಗ್ರಂ.ಸಂ. | ಹೆಸರು | ಟೀಕಾಕಾರರು | ಟಿಪ್ಪಣಿಕಾರರು | ವಿಶೇಷ |
|---|---|---|---|---|
| ೧ | ಋಗ್ಭಾಷ್ಯ | ೧. ಶ್ರೀಮಜ್ಜಯತೀರ್ಥರು (ಸಂಬಂಧ ದೀಪಿಕಾ)<br>೨. ಋಗ್ಟಿಕಿಚ್ಛಾ<br>೩. ಜಗನ್ನಾಥ ತೀರ್ಥೀಯ ⊗<br>೪. ಸತ್ಯನಾಥತೀರ್ಥರು<br>೫. ಸುಮತೀಂದ್ರರು | ೧. ನರಸಿಂಹಾಚಾರ್ಯ ವಿರಚಿತ<br>೨. ಶ್ರೀಮಾಧವತೀರ್ಥರು ಋಗ್ಭಾಷ್ಯ ವಿವೃತ್ತಿ<br>೩. ಶ್ರೀಮದ್ರಾಘವೇಂದ್ರತೀರ್ಥಕೃತ ಮಂತ್ರಾರ್ಥ ಮಂಜರಿ–ಬಿದರಹಳ್ಳಿ ಶ್ರೀನಿವಾಸತೀರ್ಥರು<br>೪. ಕಂಬಾಲು ರಾಮಚಂದ್ರತೀರ್ಥರು ⊗<br>೫. ವಿದ್ಯಾಧೀಶತೀರ್ಥರು–ಕೇಶವಾಚಾರ್ಯ ಪಾಂಡುರಂಗಿ | |
| ೨ | ಐತರೇಯ ಉಪನಿಷದ್ಭಾಷ್ಯ (ಋಗ್ಭಾಷ್ಯ) | ೧. ಐತರೇಯ ಭಾಷ್ಯ ರತ್ನಮಾಲ (ಐತರೀಯ ತಾಮ್ರಪರ್ಣಿ)<br>೨. ರಾಮಚಂದ್ರತೀರ್ಥೀಯ ⊗<br>೩. ವರದೇಂದ್ರತೀರ್ಥೀಯ ⊗<br>೪. ವಿಶ್ವೇಶತೀರ್ಥೀಯ ⊗ | ೧. ಶ್ರೀಮದ್ರಾಘವೇಂದ್ರಯತಿಕೃತ ಉಪನಿಷತ್ ಖಂಡಾರ್ಥ<br>೨. ಕೃಷ್ಣಾಚಾರ್ಯಕೃತ ಟಿಪ್ಪಣಿ | |
| ೩ | ಈಶಾವಾಸ್ಯ ಉಪನಿಷದ್ಭಾಷ್ಯ (ಶುಕ್ಲಯಜುರ್ವೇದ ಸಂಹಿತೆ) | ೧. ಶ್ರೀಜಯತೀರ್ಥವಿರಚಿತ ಟೀಕಾ (ಯಾಜ್ಞೀಯಮಂತ್ರ ಭಾಷ್ಯ ವಿವರಣಂ)<br>೨. ವರದ ತೀರ್ಥೀಯ ⊗ | ೧. ಶ್ರೀಮದ್ರಾಘವೇಂದ್ರಯತಿಕೃತ ಖಂಡಾರ್ಥ<br>೨. ಶ್ರೀವಾದಿರಾಜತೀರ್ಥೀಯ ಪ್ರಕಾಶಿಕ<br>೩. ರಘುನಾಥಯತಿ ಕೃತ ಈಶಾವಾಸ್ಯ ಭಾಷ್ಯ ಟೀಕಾವಿವೃತ್ತಿಃ<br>೪. ಛಲಾರಿ ಟಿಪ್ಪಣಿ | |
| ೪ | ಬೃಹದಾರಣ್ಯಕ ಉಪನಿಷದ್ಭಾಷ್ಯ (ಶುಕ್ಲಯಜುರ್ವೇದ) | | ೧. ಶ್ರೀರಘೋತ್ತಮತೀರ್ಥ ಕೃತ ಉಪನಿಷತ್ ಖಂಡಾರ್ಥ<br>೨. ಶ್ರೀರಘೋತ್ತಮತೀರ್ಥ ಕೃತ (ಪರಬ್ರಹ್ಮ ಪ್ರಕಾಶಿಕಾ) ಭಾವಬೋಧ ಭಾಷ್ಯಾರ್ಥ<br>೩. ಶ್ರೀರಾಘವೇಂದ್ರಯತಿ ಕೃತ ಉಪನಿಷತ್ ಖಂಡಾರ್ಥ<br>೪. ವರದ ತೀರ್ಥೀಯ ⊗ | |



| ಗ್ರಂ.ಸಂ. | ಹೆಸರು | ಟೀಕಾಕಾರರು | ಟಿಪ್ಪಣಿಕಾರರು | ವಿಶೇಷ |
|---|---|---|---|---|
| ೫ | ಕಾಠಕೋಪನಿಷದ್ಭಾಷ್ಯ (ಶುಕ್ಲಯಜುರ್ವೇದ) | ೧. ಶ್ರೀಮಜ್ಜಯತೀರ್ಥರ ಶಿಷ್ಯ ವ್ಯಾಸತೀರ್ಥ ವಿರಚಿತ ಟೀಕಾ<br>೨. ವೇದೇಶತೀರ್ಥೀಯ ಟೀಕಾ ಇವರದೇ ಉಪನಿಷತ್ ಖಂಡಾರ್ಥ | ೧. ಶ್ರೀಮದ್ರಾಘವೇಂದ್ರತೀರ್ಥಕೃತ ಉಪನಿಷತ್ ಖಂಡಾರ್ಥ<br>೨. ವರದ ತೀರ್ಥೀಯ ಟಿಪ್ಪಣಿ ⊗ | |
| ೬ | ತೈತ್ತರೀಯೋಪ–ನಿಷದ್ಭಾಷ್ಯ (ಕೃಷ್ಣಯಜುರ್ವೇದ) | ೧. ವ್ಯಾಸತೀರ್ಥಕೃತ ಭಾಷ್ಯ ವಿವರಣ ಟೀಕಾ | ೧. ಶ್ರೀಮದ್ರಾಘವೇಂದ್ರಯತಿಕೃತ ಉಪನಿಷತ್ ಖಂಡಾರ್ಥ<br>೨. ಶ್ರೀನಿವಾಸತೀರ್ಥೀಯ ಖಂಡಾರ್ಥ<br>೩. ಪ್ರಮೇಯ ಸಂಗ್ರಹ ⊗<br>೪. ಶ್ರೀನಿವಾಸತೀರ್ಥೀಯ ಪದಾರ್ಥ ದೀಪಿಕಾ<br>೫. ವರದ ತೀರ್ಥೀಯ ⊗<br>೬. ಕಾಶಿಕಾನರಸಿಂಹಭಿಕ್ಷು ಖಂಡಾರ್ಥ ಪ್ರಕಾಶಿಕಾ⊗ | |
| ೭ | ಛಂದೋಗ್ಯ ಉಪನಿಷದ್ಭಾಷ್ಯ (ಸಾಮವೇದ) | ೧. ವೇದೇಶೀಯ ಟೀಕಾ (ಪದಾರ್ಥ ಕೌಮುದಿ) | ೧. ಶ್ರೀಮದ್ರಾಘವೇಂದ್ರಯತಿಕೃತ ಖಂಡಾರ್ಥ<br>೨. ವೇದೇಶೀಯ ಖಂಡಾರ್ಥ<br>೩. ಪ್ರಮೇಯ ಸಂಗ್ರಹ ⊗<br>೪. ವರದ ತೀರ್ಥೀಯ ⊗ | |
| ೮ | ತಲವಕಾರೋಪನಿಷತ್ ಭಾಷ್ಯ(ಸಾಮವೇದ) | ೧. ವೇದೇಶೀಯ ಭಾಷ್ಯ ವಿವರಣ<br>೨. ವ್ಯಾಸತೀರ್ಥೀಯ ಭಾಷ್ಯ ಟೀಕಾ | ೧. ಶ್ರೀಮದ್ರಾಘವೇಂದ್ರಯತಿಕೃತ ಖಂಡಾರ್ಥ<br>೨. ವರದ ತೀರ್ಥೀಯ ⊗ | ಪ್ರಮೇಯ ಸಂಗ್ರಹ⊗ |
| ೯ | ಷಟ್ಪ್ರಶ್ನೋಪನಿಷ–ದ್ಭಾಷ್ಯ(ಅಥರ್ವಣ) | ೧. ಶ್ರೀಜಯತೀರ್ಥಕೃತ ಟೀಕಾ<br>೨. ಮಾಂಕಾಲೀಯ ಭಾಷ್ಯ ಟೀಕಾ | ೧. ಶ್ರೀಮದ್ರಾಘವೇಂದ್ರಯತಿಕೃತ ಖಂಡಾರ್ಥ<br>೨. ವರದ ತೀರ್ಥೀಯ ⊗ | ಪ್ರಮೇಯ ಸಂಗ್ರಹ⊗ |

| ಗ್ರಂ.ಸಂ | ಹೆಸರು | ಟೀಕಾಕಾರರು | ಟಿಪ್ಪಣಿಕಾರರು | ವಿಶೇಷ |
|---|---|---|---|---|
| ೧೦ | ಮಾಂಡೂಕೋಪನಿಷದ್ಭಾಷ್ಯ (ಅಥರ್ವಣ) | ೧. ಶ್ರೀನಿವಾಸತೀರ್ಥೀಯ ಖಂಡಾರ್ಥ<br>೨. –"– ಪದಾರ್ಥ ದೀಪಿಕಾ ಭಾವಾರ್ಥ<br>೩. ವ್ಯಾಸತೀರ್ಥೀಯ ಭಾಷ್ಯಾರ್ಥ<br>೪. ವ್ಯಾಸತೀರ್ಥೀಯ ಖಂಡಾರ್ಥ<br>೫. ವರದೇಶತೀರ್ಥೀಯ ⊗ | ೧. ಶ್ರೀಮದ್ರಾಘವೇಂದ್ರಯತಿಕೃತ ಖಂಡಾರ್ಥ | ಪ್ರಮೇಯ ಸಂಗ್ರಹ⊗ |
| ೧೧ | ಅಥರ್ವಣೋಪನಿಷದ್ಭಾಷ್ಯ (ಅಥರ್ವಣ) | ೧. ವ್ಯಾಸತೀರ್ಥೀಯ ಭಾಷ್ಯ ಟೀಕಾ<br>೨. ಕೃಷ್ಣಾಚಾರ್ಯಕೃತ ಉಪನಿಷದ್ಭಾಷ್ಯ ವಿವರಣಂ⊗<br>೩. ಶೃತ್ಯರ್ಥ ಪ್ರಕಾಶಿಕಾ ನರಸಿಂಹಭಿಕ್ಷು ವಿರಚಿತ⊗ | ೧. ಶ್ರೀಮದ್ರಾಘವೇಂದ್ರಯತಿಕೃತ ಖಂಡಾರ್ಥ<br>೨. ಉಮರ್ಜಿ ಅಥರ್ವಣ ಭಾಷ್ಯ ವಿವರಣಂ<br>೩. ವರದತೀರ್ಥೀಯ ⊗ | ಪ್ರಮೇಯ ಸಂಗ್ರಹ⊗ |

## ಸೂತ್ರಪ್ರಸ್ಥಾನ

| | | | | |
|---|---|---|---|---|
| ೧೨ | ಬ್ರಹ್ಮಸೂತ್ರಭಾಷ್ಯ ಶ್ರೀಪದ್ಮನಾಭತೀರ್ಥರ ಸತ್ತರ್ಕದೀಪಾವಳಿ | ೧. ತ್ರಿವಿಕ್ರಮಪಂಡಿತಾಚಾರ್ಯಕೃತ ಟೀಕಾ ತತ್ವಪ್ರದೀಪಾ<br>೨. ಶ್ರೀಮಜ್ಜಯತೀರ್ಥಕೃತ ತತ್ವಪ್ರಕಾಶಿಕಾ<br>೩. ಭೀಷ್ಯ ಘಟಿಕಾ ಶೃತ್ಯರ್ಥರತ್ನಮಾಲ<br>೪. ವಾದಿರಾಜೀಯ ಬ್ರಹ್ಮಸೂತ್ರಾರ್ಥ ನಿಬದ್ಧ ಅಧಿಕರಣ ನಾಮಾವಳಿ<br>೫. ಭಾವಪ್ರದೀಪ ⊗<br>೬. ವಿಜಯೀಂದ್ರತೀರ್ಥೀಯ ⊗<br>೭. ಧೀರೇಂದ್ರಕೃತ ವಿಜಯವಾಕ್ಯ ಸಂಗ್ರಹ ⊗<br>೮. ದಾಸಾಚಾರ್ಯಕೃತ ಅಧಿಕರಣಾರ್ಥ ಸಂಗ್ರಹ<br>೯. ಶ್ರೀರಾಘವೇಂದ್ರಯತಿಕೃತ ನ್ಯಾಯರತ್ನಾವಳಿ<br>೧೦. ತತ್ವಮಾಣಿಕ್ಯ ಪೀಟಿಕಾ ವಿಜಯೀಂದ್ರತೀರ್ಥೀಯ | ೧. ಶ್ರೀಮದ್ರಾಘವೇಂದ್ರಯತಿಕೃತ ತಂತ್ರದೀಪಿಕಾ ಸೂತ್ರಾರ್ಥ<br>೨. ಜಗನ್ನಾಥಯತಿಕೃತ ಭಾಷ್ಯದೀಪಿಕಾ<br>೩. ಶ್ರೀಮುಷ್ಣ ಸುಬ್ಬಣಾಚಾರ್ಯ ಕೃತ ಸೂತ್ರಾರ್ಥ ಮಣಿಮಂಜರಿ<br>೪. ತತ್ವಪ್ರಕಾಶಿಕ ಸುಧಾದಿ ಸರ್ವಗಳ ವಿವರಣೆ<br>೫. ತತ್ವಪ್ರಕಾಶಿಕಾ ಸಾರ ⊗<br>೬. ಭಾವರತ್ನಾಕೋಶ ⊗ ಸುಮತೀಂದ್ರರು<br>೭. ಛಲಾರಿ ⊗<br>೮. ರಘೂತ್ತಮತೀರ್ಥೀಯ ಭಾವಬೋಧ<br>೯. ಅಭಿನವ ಚಂದ್ರಿಕಾ ಸತ್ಯನಾಥೀಯ ⊗<br>೧೦. ಶಿಷ್ಟ ತಾತ್ಪರ್ಯಚಂದ್ರಿಕಾ ರಘುನಾಥೀಯ | ತತ್ವಪ್ರಕಾಶಿಕ ಟಿಪ್ಪಣಿ<br>೧. ವಾದಿರಾಜತೀರ್ಥೀಯ ಗುರ್ವರ್ಥ ದೀಪಿಕಾ<br>೨. ವ್ಯಾಸತೀರ್ಥೀಯ ತಾತ್ಪರ್ಯ ಚಂದ್ರಿಕಾ<br>೩. ಶ್ರೀರಾಘವೇಂದ್ರಯತಿ ಕೃತ ಶ್ರೀಭಾಷ್ಯಟೀಕಾ ಭಾವದೀಪಃ<br>೪. ಬಿದರಹಳ್ಳಿ ಶ್ರೀನಿವಾಸ ತೀರ್ಥೀಯ<br>೫. ಶರ್ಕರಾ ಶ್ರೀನಿವಾಸೀಯ |



| | | | | |
|---|---|---|---|---|
| ೧೩ | ಶ್ರೀಮದಣುಭಾಷ್ಯಂ | | ೧. ಶ್ರೀಮದ್ರಾಘವೇಂದ್ರಯತಿಕೃತ ತತ್ವಮಂಜರಿ<br>೨. ಶ್ರೀನಿವಾಸತೀರ್ಥೀಯ (ತತ್ವವಿವೃತಿ)<br>೩. ರಘುನಾಥತೀರ್ಥೀಯ | |
| ೧೪ | ಶ್ರೀಮದನುವ್ಯಾಖ್ಯಾನಂ | ೧. ತ್ರಿವಿಕ್ರಮಪಂಡಿತಾಚಾರ್ಯಕೃತ ನಯಚಂದ್ರಿಕಾ<br>೨. ಪದ್ಮನಾಭತೀರ್ಥೀಯ ಸನ್ನ್ಯಾಯರತ್ನಾವಣಿ<br>೩. ಶ್ರೀಮಜ್ಜಯತೀರ್ಥವಿರಚಿತ ಶ್ರೀಮನ್ನ್ಯಾಯಸುಧಾ | ಶ್ರೀಮನ್ನ್ಯಾಯಸುಧಾ ಟಿಪ್ಪಣಿಗಳು<br>೧. ಶ್ರೀಮದ್ರಾಘವೇಂದ್ರ ವಿರಚಿತ ಪರಿಮಳ<br>೨. ಯಾದುಪತ್ಯಾಚಾರ್ಯ ಕೃತ ಟಿಪ್ಪಣಿ – ನ್ಯಾಯಸುಧಾ ವಿವೃತ್ತಿ<br>೩. ಶ್ರೀವಾದಿರಾಜಯತಿ ಕೃತ ಗುರ್ವರ್ಥ ದೀಪಿಕಾ<br>೪. ಶ್ರೀನಿವಾಸತೀರ್ಥೀಯ ಟಿಪ್ಪಣಿ ⊗<br>೫. ವಾಕ್ಯಾರ್ಥ ಚಂದ್ರಿಕಾ – ವಿದ್ಯಾಧೀಶ ಕೃತ<br>೬. ಶ್ರೀನಿಧಿತೀರ್ಥರು ⊗ ೭. ಕುಂಡಲಗಿರಿ ⊗<br>೮. ವಿಠಲ ಭಟ್ಟೀಯ ⊗ ೯. ಕಾಶಿಕಾ ⊗<br>೧೦. ಕಂಬಖಾರು ರಾಮಚಂದ್ರತೀರ್ಥಿಯ<br>೧೧. ಗುರುರಾಜೀಯ ⊗ ೧೨. ಚಷಕ ⊗<br>೧೩. ಸುಧಾಸಾರಸಂಗ್ರಹ ⊗ – ಕೇಶವಾಚಾರ್ಯ ಪಾಂಡುರಂಗಿ – | |
| ೧೫ | ಶ್ರೀನ್ಯಾಯವಿವರಣಂ | ೧. ಶ್ರೀಮಜ್ಜಯತೀರ್ಥವಿರಚಿತ ನ್ಯಾಯವಿವರಣ ಟೀಕಾ<br>೨. ರಘೂತ್ತಮಯತಿಕೃತ ನ್ಯಾಯವಿವರಣ ಭಾವ | ಶೇಷವಾಕ್ಯಾರ್ಥ ಚಂದ್ರಿಕಾ<br>೧. ಪ್ರದೀಪ<br>೨. ವಿಶ್ವೋತ್ತಮ ತೀರ್ಥೀಯ | |

## ಗೀತಾಪ್ರಸ್ಥಾನ

| ಗ್ರಂ.ಸಂ. | ಹೆಸರು | ಟೀಕಾಕಾರರು | ಟಿಪ್ಪಣಿಕಾರರು | ವಿಶೇಷ |
|---|---|---|---|---|
| ೧೬ | ಗೀತಾಭಾಷ್ಯಂ | ೧. ಶ್ರೀಮಜ್ಜಯತೀರ್ಥಯತಿಕೃತ ಪ್ರಮೇಯ ದೀಪಿಕಾ / ನ್ಯಾಯದೀಪಿಕಾ<br>೨. ಶ್ರೀಮದ್ರಾಘವೇಂದ್ರಯತಿಕೃತ ಗೀತಾವಿವೃತ್ತಿ<br>೩. ವಾದಿರಾಜೀಯಕೃತ<br>೪. ಆಯೀ ಆಚಾರ್ಯ ಕೃತ ಗೀತಾವಿವೃತ್ತಿಃ<br>೫. ಕೊಯಂಬತ್ತೂರು ಪದ್ಮನಾಭಚಾರ್ಯ ಕೃತ ವ್ಯಾಖ್ಯಾನ (ಆಂಗ್ಲ ಭಾಷೆ) | ೧. ಕೃಷ್ಣಾಚಾರ್ಯ (ತಾಮ್ರಪರ್ಣಿ) ಪ್ರಮೇಯ ದೀಪಿಕಾ ಪ್ರಕಾಶ<br>೨. ಶ್ರೀನಿವಾಸಸೂರಿ – ಭಾವ ಪ್ರದೀಪಿಕಾ<br>೩. ರಘೂತ್ತಮವಿರಚಿತ ಭಾವಬೋಧ<br>೪. ಭಾವರತ್ನಕೋಶ<br>೫. ದುರ್ಬೋಧ ಸ್ಥಲೆ ಅಭಿನವ ಟಿಪ್ಪಣಿ<br>೬. ವರದಾಚಾರ್ಯ ಟಿಪ್ಪಣಿ ⊗ | |
| ೧೭ | ಗೀತಾತಾತ್ಪರ್ಯ | ೧. ಶ್ರೀಮಜ್ಜಯತೀರ್ಥವಿರಚಿತ ನ್ಯಾಯ ದೀಪಿಕಾ | ೧. ಶ್ರೀನಿವಾಸ ವಿರಚಿತ ನ್ಯಾಯ ದೀಪಿಕಾ ಕಿರಣಾವಳಿ | |

## ಮಹಾಭಾರತ

| | | | | |
|---|---|---|---|---|
| ೧೮ | ತಾತ್ಪರ್ಯನಿರ್ಣಯ | ೧. ವಾದಿರಾಜಕೃತ ಭಾರತ ಲಕ್ಷಣಾಲಂಕಾರ ಮತ್ತು ಭಾವಪ್ರಕಾಶಿಕ<br>೨. ಶ್ರೀಮದ್ರಾಘವೇಂದ್ರಯತಿಕೃತ ಸಾರಸಂಗ್ರಹ<br>೩. ಜನಾರ್ದನ ಭಟ್ಟೀಯ ಪದಾರ್ಥ ದೀಪಿಕಾ<br>೪. ವೇದಾಂತ ತೀರ್ಥೀಯ ⊗ | ೧. ಶ್ರೀನಿವಾಸತೀರ್ಥೀಯ ⊗ | |
| ೧೯ | ಯಮಕಭಾರತ | ೧. ತಮ್ಮಣ್ಣ ಭಟ್ಟೀಯ ⊗<br>೨. ವೆಂಕಟೇಶ ಸೂರಿ ⊗ | | |



| | | | | |
|---|---|---|---|---|
| ೨೦ | ಭಾಗವತತಾತ್ಪರ್ಯ | ೧. ವಿಜಯಧ್ವಜೀಯ (ಪದರತ್ನಾವಳಿ) *<br>೨. ಯಾದುಪತ್ಯ – ವ್ಯಾಖ್ಯ *<br>೩. ಶ್ರೀನಿವಾಸತೀರ್ಥೀಯ ವ್ಯಾಖ್ಯ * | ೧. ನರಸಿಂಹಾಚಾರ್ಯಕೃತ ಭಾಗವತ ತಾತ್ಪರ್ಯ ದೀಪಿಕಾ ⊗<br>೨. ಶ್ರೀಸತ್ಯಧರ್ಮತೀರ್ಥರು<br>೩. ಮಾದನೂರು ಶ್ರೀವಿಷ್ಣುತೀರ್ಥರ ಶ್ರೀಭಾಗವತಸಾರೋದ್ಧಾರ | * ಇವು ಟೀಕಾ ಗ್ರಂಥಗಳೇ ಆದರೂ ವ್ಯಾಖ್ಯಾನ ರೂಪವಾಗಿರುವುದು |

## ಪ್ರಕರಣ ಗ್ರಂಥಗಳು

| | | | | |
|---|---|---|---|---|
| ೨೧ | ಪ್ರಮಾಣಲಕ್ಷಣಂ | ೧. ಶ್ರೀಮಜ್ಜಯತೀರ್ಥಕೃತ ಟೀಕಾ<br>೨. ವಿಜಯೀಂದ್ರಕೃತ ಟೀಕಾ | ೧. ಶ್ರೀಮದ್ರಾಘವೇಂದ್ರಯತಿಕೃತ ಭಾವದೀಪ<br>೨. ಶ್ರೀನಿವಾಸತೀರ್ಥೀಯ ಟಿಪ್ಪಣಿ<br>೩. ವಾದೇಶತೀರ್ಥೀಯ ವಿವರಣಂ ⊗<br>೪. ರೊಟ್ಟಿ ವೆಂಕಟಾದ್ರಿ ಭಟ್ಟೀಯ ⊗ | |
| ೨೨ | ಕಥಾಲಕ್ಷಣಂ | ೧. ಶ್ರೀಮಜ್ಜಯತೀರ್ಥವಿರಚಿತ ಟೀಕಾ<br>೨. ವಿದ್ಯಾಧೀಶತೀರ್ಥ ಟೀಕಾ | ೧. ಶ್ರೀಮದ್ರಾಘವೇಂದ್ರಯತಿಕೃತ ಟಿಪ್ಪಣಿ<br>೨. ವೇದೇಶತೀರ್ಥೀಯ ವ್ಯಾಖ್ಯಾ<br>೩. ರೊಟ್ಟಿ ವೆಂಕಟಾದ್ರಿ ಭಟ್ಟೀಯ ⊗ | |

## ಖಂಡನ (ದೂಷಣ) ತ್ರಯಂ

| | | | | |
|---|---|---|---|---|
| ೨೩ | ಉಪಾದಿಖಂಡನ | ೧. ಶ್ರೀಮಜ್ಜಯತೀರ್ಥವಿರಚಿತ ಟೀಕಾ<br>೨. ವಾದಿರಾಜೀಯ ಉಪನ್ಯಾಸ ರತ್ನಮಾಲಾ | ೧. ಶ್ರೀವ್ಯಾಸರಾಜರ ಮಂದಾರ ಮಂಜರಿ<br>೨. ಶ್ರೀನಿವಾಸತೀರ್ಥೀಯ ಟಿಪ್ಪಣಿ<br>೩. ಸತ್ಯನಾಥತೀರ್ಥೀಯ ಪರಶುನಾಮಕ ಟಿಪ್ಪಣಿ<br>೪. ರೊಟ್ಟಿ ವೆಂಕಟಾದ್ರಿ ಭಟ್ಟೀಯ ⊗ | |

| ಗ್ರಂ.ಸಂ. | ಹೆಸರು | ಟೀಕಾಕಾರರು | ಟಿಪ್ಪಣಿಕಾರರು | ವಿಶೇಷ |
|---|---|---|---|---|
| ೧೪ | ಮಾಯಾವಾದ ಖಂಡನ | ೧. ಶ್ರೀಮಜ್ಜಯತೀರ್ಥೀಯ ವಿವರಣಂ<br>೨. ಶ್ರೀವಾದಿರಾಜೀಯ (ಭಾವಪ್ರಕಾಶಿಕ) | ೧. ಶ್ರೀನಿವಾಸತೀರ್ಥೀಯ (ಖಂಡನ ಪಂಚಕ)<br>೨. ಶ್ರೀವ್ಯಾಸರಾಜಕೃತ ಮಂದಾರ ಮಂಜರಿ<br>೩. ಶ್ರೀಸತ್ಯನಾಥತೀರ್ಥೀಯ (ಟಿಪ್ಪಣಿ)<br>೪. ರೊಟ್ಟಿ ವೆಂಕಟಾದ್ರಿ ಭಟ್ಟೀಯ<br>೫. ಶ್ರೀಮದ್ರಾಘವೇಂದ್ರಯತಿಕೃತ ಟೀಕಾ | |
| ೧೫ | ಪ್ರಪಂಚ ಮಿಥ್ಯಾತ್ವಾನು ಮಾನ ಖಂಡನಂ | | | |

## ಪ್ರಕರಣ ಗ್ರಂಥಗಳು

| | | | | |
|---|---|---|---|---|
| ೧೬ | ವಿಷ್ಣುತತ್ವನಿರ್ಣಯ | ೧. ಶ್ರೀಮಜ್ಜಯತೀರ್ಥರು – ಟೀಕಾ | ೧. ಶ್ರೀಮದ್ರಾಘವೇಂದ್ರಯತಿಕೃತ ಭಾವದೀಪ<br>೨. ವಿಜಯೀಂದ್ರತೀರ್ಥೀಯ<br>೩. ತಾಮ್ರಪರ್ಣಿ ಕೃಷ್ಣಾಚಾರ್ಯಕೃತ ಟೀಕಾ<br>೪. ಗೂಢ ಕರ್ತೃಕ<br>೫. ರೊಟ್ಟಿ ವೆಂಕಟಾದ್ರಿ ಭಟ್ಟೀಯ | |
| ೧೭ | ತತ್ವಸಂಖ್ಯಾನಂ | ೧. ಶ್ರೀಮಜ್ಜಯತೀರ್ಥವಿರಚಿತ ಟೀಕಾ<br>೨. ಶ್ರೀವ್ಯಾಸರಾಜಕೃತ ಮಂದಾರ ಮಂಜರಿ | ೧. ವಿಜಯೀಂದ್ರತೀರ್ಥೀಯ<br>೨. ಶ್ರೀಮದ್ರಾಘವೇಂದ್ರಯತಿಕೃತ ಟಿಪ್ಪಣಿ<br>೩. ಕಾಶಿಕಾ ⊗<br>೪. ಸತ್ಯಧರ್ಮೀಯ ಟಿಪ್ಪಣಿ<br>೫. ಯಾದುಪತ್ಯಾಚಾರ್ಯ ಟಿಪ್ಪಣಿ<br>೬. ಕೇಶವಭಟ್ಟೀಯ ಪಾಂಡುರಂಗೀಯ ⊗<br>೭. ರೊಟ್ಟಿ ವೆಂಕಟಾದ್ರಿ ಭಟ್ಟೀಯ | |
| ೧೮ | ತತ್ವವಿವೇಕ | | | |
| ೧೯ | ತತ್ವೋದ್ಯೋತ | ೧. ಶ್ರೀಮಜ್ಜಯತೀರ್ಥವಿರಚಿತ ಟೀಕಾ | ೧. ವಿಜಯೀಂದ್ರತೀರ್ಥೀಯ<br>೨. ಶ್ರೀಮದ್ರಾಘವೇಂದ್ರಯತಿಕೃತ ಟಿಪ್ಪಣಿ<br>೩. ಕಾಶಿಕಾ ⊗<br>೪. ಸತ್ಯಧರ್ಮೀಯ ಟಿಪ್ಪಣಿ<br>೫. ಯಾದುಪತ್ಯಾಚಾರ್ಯ ಟಿಪ್ಪಣಿ<br>೬. ಕೇಶವಭಟ್ಟೀಯ ಪಾಂಡುರಂಗೀಯ ⊗<br>೭. ರೊಟ್ಟಿ ವೆಂಕಟಾದ್ರಿ ಭಟ್ಟೀಯ<br>೮. ದ್ವೈತದ್ಯುಮಣಿ (ಹುಲಿಗೀ ಶ್ರೀನಾಥಾಚಾರ್ಯ ವಿರಚಿತ) | |
| ೨೦ | ಕರ್ಮನಿರ್ಣಯ | ೧. ಶ್ರೀಮಜ್ಜಯತೀರ್ಥವಿರಚಿತ ಟೀಕಾ | ೧. ಶ್ರೀಮದ್ರಾಘವೇಂದ್ರಯತಿಕೃತ ಟಿಪ್ಪಣಿ<br>೨. ಶ್ರೀನಿವಾಸತೀರ್ಥೀಯ ಪಂಚವಿವರಣಂ<br>೩. ರೊಟ್ಟಿ ವೆಂಕಟಾದ್ರಿ ಭಟ್ಟೀಯ ⊗ | |

## ಸ್ತೋತ್ರಗಳು

| | | | | |
|---|---|---|---|---|
| ೨೧ | ನರಸಿಂಹನಖಸ್ತುತಿ | | ೧. ವಿಶ್ವಪತಿತೀರ್ಥೀಯ<br>೨. ಜನಾರ್ದನ ಭಟ್ಟೀಯ<br>೩. ವೇದಾತ್ಮಯತಿಕೃತ ವ್ಯಾಖ್ಯಾ ⊗<br>೪. ಛಲಾರಿ ಶೇಷಾಚಾರ್ಯ ವ್ಯಾಖ್ಯಾ<br>೫. ಕೊರ್ಯಂಬತ್ತೂರು ಪದ್ಮನಾಭಾಚಾರ್ಯ ವ್ಯಾಖ್ಯಾ (ಇವರು ಆಂಗ್ಲ ಭಾಷೆಯಲ್ಲೂ ಬರೆದಿದ್ದಾರೆ) | |
| ೨೨ | ದ್ವಾದಶಸ್ತೋತ್ರ | | | |

## ಆಚಾರ ವಿಚಾರ

| ಗ್ರಂ.ಸಂ. | ಹೆಸರು | ಟೀಕಾಕಾರರು | ಟಿಪ್ಪಣಿಕಾರರು | ವಿಶೇಷ |
|---|---|---|---|---|
| ೩೩ | ಕೃಷ್ಣಾಮೃತ ಮಹಾರ್ಣವಂ | ೧. ವಿಠಲಾಚಾರ್ಯ ಪುತ್ರ ಶ್ರೀನಿವಾಸಾಚಾರ್ಯ ಕೃತ ಟೀಕಾ | ೧. ಕೃಷ್ಣಾಚಾರ್ಯಕೃತ ವ್ಯಾಖ್ಯಾ ⊗<br>೨. ತಾಮ್ರಪರ್ಣಿ ಶ್ರೀನಿವಾಸತೀರ್ಥೀಯ ⊗ | |
| ೩೪ | ತಂತ್ರಸಾರಸಂಗ್ರಹ | ೧. ಸುಮತೀಂದ್ರಕೃತ ಟೀಕಾ | ೧. ಥಲಾರಿ ಶೇಷಾಚಾರ್ಯ ವ್ಯಾಖ್ಯಾ<br>೨. ತಾಮ್ರಪರ್ಣಿಯ ವ್ಯಾಖ್ಯಾ ⊗<br>೩. ತಂತ್ರಸಾರಸಂಗ್ರಹರೂಪ ಪದ್ಯಮಾಲಾ ⊗<br>೪. ಶ್ರೀವೇದವ್ಯಾಸವಿರಚಿತ ಪದಭಾವ ಪ್ರಬೋಧಿನಿ<br>೫. ಶರ್ಕರ ⊗ | |
| ೩೫ | ಸದಾಚಾರಸ್ಮೃತಿ | ೧. ನಾರಾಯಣಾಚಾರ್ಯಕೃತ ವೈಷ್ಣವ ಆಚಾರ ಪದ್ಧತಿ<br>೨. ಶರ್ಕರಾ ಶ್ರೀನಿವಾಸತೀರ್ಥೀಯ | ೧. ಶ್ರೀನಿವಾಸ ಭಟ್ಟೀಯ ವ್ಯಾಖ್ಯಾ<br>೨. ನರಹರ್ಯಾಚಾರ್ಯ ಭಾವ ಪ್ರಬೋಧಿನಿ<br>೩. ಆಯೀ ನರಹರಿ ಆಚಾರ್ಯ ವ್ಯಾಖ್ಯಾರ್ಥ<br>೪. ಸ್ಮೃತಿ ಮುಕ್ತಾವಳಿ ಕೃಷ್ಣಾಚಾರ್ಯ ವಿವೃತ್ತಿ | |
| ೩೬ | ಯತಿಪ್ರಣವಕಲ್ಪ | ೧. ಸನ್ಯಾಸ ಪದ್ಧತಿ (ವಿಷ್ಣುತೀರ್ಥರು) ಆಚಾರ್ಯ ಮಧ್ವರ ತಮ್ಮಂದಿರು | ೧. ತಾಮ್ರಪರ್ಣಿ ಆನಂದತೀರ್ಥಾಚಾರ್ಯ | |
| ೩೭ | ಜಯಂತಿನಿರ್ಣಯ | | ಯಾರೂ ಟೀಕಾ ವ್ಯಾಖ್ಯಾನ ಬರೆದಂತೆ ತೋರುತ್ತಿಲ್ಲ ಕಾರಣ ಗ್ರಂಥವು ಸ್ಪಷ್ಟವಾಗಿಯೇ ಇದೆ. | |



## ಅವಿಶಿಷ್ಟ ಗ್ರಂಥಗಳು (ಶ್ರೀಮದಾನಂದತೀರ್ಥರು ರಚಿಸಿದ್ದಾರೆಂದು ಪ್ರಸಿದ್ಧಿ)

| | | | | |
|---|---|---|---|---|
| ೩೮ | ಕಂದುಕಸ್ತುತಿ (ಶ್ರೀಕೃಷ್ಣಸ್ತುತಿ) | | ಶ್ರೀಮದಾಚಾರ್ಯರು ಬಾಲ್ಯದಲ್ಲೇ ರಚಿಸಿದ್ದಾಗಿ ತಿಳಿದುಬರುತ್ತೆ | |
| ೩೯ | ನ್ಯಾಸಪದ್ಧತಿ | ಯತಿಗಳ ನಿತ್ಯಾನುಷ್ಠಾನ ಸೂಚಿ ಪ್ರಣವಕಲ್ಪಕ್ಕೆ ಪರಿಶಿಷ್ಟ | | |
| ೪೦ | ತಿಥಿನಿರ್ಣಯ | ಅನುತ್ತಮ ಗಣಿತ ಗ್ರಂಥ | | |

ಯಸ್ಯತ್ರೀಣ್ಯು ದಿತಾನಿ ವೇದವಚನೇ ರೂಪಾಣಿ ದಿವ್ಯಾನ್ಯಲಂ ಭಟ್ತ್‌ದ್ದರ್ಶನ ಮಿತ್ಥಮೇವ ನಿಹಿತಂ ದೇವಸ್ಯ ಭರ್ಗೋಮಹತ್ ।
ವಾಚೋರಾಮ ವಚನಯಂ ಪ್ರಥಮಕಂ ಪೃಕ್ಲೋದ್ವಿತೀಯಂ ವಪುಃ ಮಧ್ವೋಯತ್ ತೃತೀಯಮೇ ತದಮುನ್ ಗ್ರಂಥಃ ಕೃತಃ ಕೇಶವೇ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಸಂಗ್ರಹ, ವಿವರಣೆ ಮತ್ತು ಕನ್ನಡಾನುವಾದ
ಪ್ರೊ॥ ಪಂ॥ ಬದರೀನಾಥಾಚಾರ್ಯ ಘೂಳೀ
ಎಂ.ಎ.